Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5–0–0.

ಸಂಪುಟ ೨೮ | ತಾರೀಕು ೧೩–೧೧–೧೯೫೦ನೇ ಶುಕ್ರವಾರ | ಸಂಚಿಕೆ ೩೩

ವ್ಯಕ್ತಿ ಗೌರವ.

ಲೇ:—ಶ್ರೀ. 'ಗಣೇಶ' ಮಡಿಕೇರಿ.

ಮನುಷ್ಯನಿಗೆ ಜೀವನಕ್ಕೆ ಅತ್ಯಾವಶ್ಯವಾದ ಗಾಳಿ, ನೀರು, ಆಹಾರ, ಬಟ್ಟೆಯನ್ನು ಬಿಟ್ಟರೆ ಅತನು ಹೆಚ್ಚಾಗಿ ಅಪೇಕ್ಷಿಸುವುದು ದುಡ್ಡು. ಈ ಹಣ ಸಂಪಾದನೆಗಾಗಿ-ಸರ್ವ ಸಂಗ ಪರಿತ್ಯಾಗ ಮಾಡಿದ ನಿಜಯೋಗಿಗಳನ್ನು ಬಿಟ್ಟು-ಎಲ್ಲರೂ ಪ್ರಯತ್ನಿಸುತ್ತಾರೆ. ಇದನ್ನು ಸಾಧಿಸುವ ಮಾರ್ಗ ಒಂದೇ ಅಲ್ಲ. ಶಾರೀರಕ ಶ್ರಮದಿಂದ ಶ್ರಮಿಸಿ ಸಂಪಾದಿಸುವವರಿದ್ದಾರೆ. ಮೆದುಳಿನ ಉಪಯೋಗದಿಂದ ಸಂಪಾದಿಸುವವರಿದ್ದಾರೆ. ಇನ್ನೊಬ್ಬರಿಗೆ ಮೋಸ ಮಾಡುವವರಿದ್ದಾರೆ; ಕದಿಯುವವರಿದ್ದಾರೆ. ಭಿಕ್ಷೆ ಎತ್ತಿ ದುಡ್ಡು ಸಂಪಾದಿಸುವವರೂ ಇದ್ದಾರೆ. ಇದರ ಸಂಪಾದನೆಗೆ ಪ್ರತಿಯೊಬ್ಬನೂ ಒಂದೊಂದು ಮಾರ್ಗವನ್ನು ಹುಡುಕಿ ತೆಗೆಯುತ್ತಾನೆ. ನನ್ನನ್ನು ಈ ಲೇಖನ ಬರೆಯಲು ಪ್ರೇರೇಪಿಸಿದ ಆ ಒಲವಿನ ಹಿನ್ನೆಲೆಯಲ್ಲಿ ಸಂಪಾದನೆಯು ಅಶೆ ಇದೆ. ಹಣ ಸಂಪಾದನೆಯು ನಂತರ ಮನುಷ್ಯನು ಅಪೇಕ್ಷಿಸುವುದು ಗೌರವ. ಈ ಗೌರವವನ್ನು ಗಳಿಸಿಕೊಳ್ಳುವ ಬಗೆ ಹೇಗೆ ಎಂಬುದನ್ನು ವಿಚಾರಿಸುವದು ಇದರ ಉದ್ದಿಶ್ಯ.

ಮನುಷ್ಯನು ಅತೃಪ್ತ ಜೀವಿ. ಯಾವುದರಿಂದಲೂ ಅತನಿಗೆ ತೃಪ್ತಿ ಇಲ್ಲ. ಬಡವನಾಗಿ ಹುಟ್ಟಿದ ಅತನು ಪೃಥಮತ ಹೊಟ್ಟೆಗೆ ಅನ್ನವನ್ನೂ ಮೈಗೆ ಒಟ್ಟೆಯನ್ನೂ ಅಪೇಕ್ಷಿಸುತ್ತಾನೆ. ಇವು ದೊರೆತ ಮೇಲೆ ಕೈಯಲ್ಲಿ ನಾಲ್ಕು ಕಾಸಾಗಬೇಕೆಂದು ಬಯಸುತ್ತಾನೆ. ಕೈಯಲ್ಲಿ ನಾಲ್ಕು ಕಾಸಾದನಂತರ ಸಮಾಜದಲ್ಲಿ ಒಂದು ಗೌರವ ಸ್ಥಾನ ಪಡೆಯಬೇಕೆಂದು ಯತ್ನಿಸುತ್ತಾನೆ ಅದಕ್ಕಾಗಿಯೇ ಜಿಲ್ಲಾ ಬೋರ್ಡಿಗೋ ಶಾಸನ ಸಭೆಗೋ ನಿಂತು ಮುಂದಾಳಾಗಿಸಲು ಪ್ರಯತ್ನಿಸುತ್ತಾನೆ. ಈ ರೀತಿ ಕ್ರಮಶಃ ಮುಂದುವರಿದು ದೇಶದ ನಾಯಕನೆನಿಸಿದ ಮನುಷ್ಯನಿಗೆ ಗೌರವ ಬಂದಂತಾಯಿತೇ? ಮನುಷ್ಯನ ವ್ಯಕ್ತಿಗತ ಗೌರವಕ್ಕೂ, ಅತನ ಹಣ, ಅಧಿಕಾರ, ಪದವಿಗಳಿಗೂ ಸಂಬಂಧವಿದೆಯೇ?

ಮನುಷ್ಯನಿಗೆ ವ್ಯಕ್ತಿಗತ ಗಾಂಭೀರ್ಯ ಬೇಕು. ಈ ವ್ಯಕ್ತಿಗೌರವವಿರುವ ಮನುಷ್ಯನು ಜಗತ್ತನ್ನೇ ಅಲ್ಲಾಡಿಸಬಲ್ಲ. ಅತನ ಮುಂದೆ ಶತ್ರುಗಳೂ ಮಿತ್ರರಾಗುವರು. ಹಳ್ಳನೂ ಸತ್ಯ ನುಡಿಯುವನು, ಕೊಲೆಗಡುಕನೂ ಕೈಸಾಗದಾಗುವನು. ಹಾಗಾದರೆ ಈ ವ್ಯಕ್ತಿಗತ ಗಾಂಭೀರ್ಯವೆಂದರೇನು?

ಇದು ಇಂಥಾದ್ದೇ ಎಂದು ನಾಲ್ಕು ಅಕ್ಷರಗಳಲ್ಲಿ ಅದನ್ನು ವರ್ಣಿಸಿ ಬರೆಯಲಾಗುವುದಿಲ್ಲ. ಅದು ಭೌತಿಕವಾದುದೂ ಅಲ್ಲ; ಶಾರೀರಕವಾದುದೂ ಅಲ್ಲ. ಆತ್ಮದ ಅಂತರಾಳದಲ್ಲಿ ಹುಟ್ಟಿ ವಿಕಸಿತಗೊಂಡು ಶರೀರದ ಪ್ರತಿ ಕಾರ್ಯಗಳಲ್ಲೂ ಪ್ರತಿಬಿಂಬಿಸುವ ಜೀವನವದು. ಅದನ್ನು ಕಣ್ಣಿನಿಂದ ನೋಡಲಾಗದಿದ್ದರೂ ಕೃತಿಯಲ್ಲಿ ಗುರ್ತಿಸಬಹುದು. ಜಡವಾಗಿ ತೋರುವ ತಂತಿಯೊಳಗೆ ವಿದ್ಯುತ್ ಅಡಗಿದ್ದು ಬೆಳಕು ಕೊಡುವಂತೆ ಅಗೋಚರವಾಗಿ ಅಡಗಿದ್ದು ಕೃತಿಯಲ್ಲಿ, ನಡೆಯಲ್ಲಿ ಹೊಸ ವಾತಾವರಣವನ್ನು ಕಲ್ಪಿಸಿ ಜಗವನ್ನೇ ಈ ವ್ಯಕ್ತಿ ಗೌರವ ಗೆಲ್ಲುವದು!

ಈ ವ್ಯಕ್ತಿತ್ವವನ್ನು ಅನೇಕರು ಭೌತಿಕವಾಗಿ ವರ್ಣಿಸುತ್ತಾರೆ. ಬಾಹ್ಯವಾದ ಈ ವಿಶೇಷಣಗಳೇ ವ್ಯಕ್ತಿತ್ವವೆಂದು ಭಾವಿಸುವವರಿದ್ದಾರೆ. ದೃಢವಾದ, ಎತ್ತರವಾದ ಸುಂದರ ಶರೀರ, ಸುಂದರ ಮುಖ, ಉತ್ತಮವಾದ ಉಡಿಗೆ ತೊಡಿಗೆಗಳು, ಬಿಲೆ ಬಾಳುವ ಆಭರಣಗಳು, ಹೆಸರಿನ ಜೊತೆಗೆ ನಾಲ್ಕು ವಿದ್ಯಾಲಯಗಳ ಡಿಗ್ರಿಗಳು ಇವಿದ್ದರೆ ಮನುಷ್ಯನಿಗೆ ಎಂಥಾ ವ್ಯಕ್ತಿತ್ವ ವಿದೆಯೆಂದು ಹೇಳುವವರಿದ್ದಾರೆ. ಅವರ ದೃಷ್ಟಿಯಲ್ಲಿ ಇಂಥಾ ಮನುಷ್ಯನು ನಾಗರೀಕ, ಮುಂದಾಳು, ಸರ್ವಸ್ವ. ಆದರೆ ಮನುಷ್ಯನ ಗೌರವ ವ್ಯಕ್ತಿತ್ವಗಳು ಅತನ ಶಾರೀರಕ ಬಲ ಯಾ ಸೌಂದರ್ಯ, ಉಡಿಗೆಗೆಳೆ ಮೌಲ್ಯ ಮತ್ತು ವೈಶಿಷ್ಟ್ಯಗಳಲ್ಲ. ಗಾಳಿ ತೆಗೆದ ಬೆಲೂನು ಯಾವ ರೀತಿ ಎತ್ತರಕ್ಕೆ ಹಾರಲಾರದೋ ಅದೇ ರೀತಿ ಅತ್ಮದ ಗೌರವ ಗಾಂಭೀರ್ಯವಿಲ್ಲದ ವ್ಯಕ್ತಿ ಕೇವಲ ಉಡಿಗೆ ತೊಡಿಗೆ, ಸೌಂದರ್ಯಗಳಿಂದ ಗೌರವದ ವ್ಯಕ್ತಿಯೂಗಲಾರ.

ಶಾರೀರಕ ಶಕ್ತಿ ಗೌರವದ ಚಿಹ್ನೆಯಾದರೆ ವೈಯಲ್ಲಿ ಮಣಗಟ್ಟಲೆ ಮಾಂಸ ಬೆಳೆಸಿಕೊಂಡ ಜಟ್ಟಿಗಳು ಮಹಾ ಗೌರವದ ವ್ಯಕ್ತಿಗಳಾಗುತ್ತಿದ್ದರು. ಸೌಂದರ್ಯವು ವ್ಯಕ್ತಿಯ ಗೌರವ ಮತ್ತು ವ್ಯಕ್ತಿತ್ವವನ್ನು ಹೆಚ್ಚಿಸಬಲ್ಲುದಾಗಿದ್ದರೆ ಸುಂದರರೆಲ್ಲರೂ ಗೌರವಾನ್ವಿತರಾಗುತ್ತಿದ್ದರು ಬಹುಶಃ ಹೆಚ್ಚಿನ ಸಂಖ್ಯೆಯ ಹೆಂಗಸರು ಆದರ್ಶರೀನಿಸುತ್ತಿದ್ದರು. ಉಡುಪು, ಹೊರಗಿನ ಬಣ್ಣ, ಬೆಲೆಬಾಳುವ ಆಭರಣಗಳು ವ್ಯಕ್ತಿತ್ವವನ್ನು ಹೆಚ್ಚಿಸುತ್ತಿದ್ದರೆ ಸಿರಿವಂತರೆಲ್ಲಾ ಘನವಂತರೆನಿಸುತ್ತಿದ್ದರು. ಆದರೆ ಪರಿಸ್ಥಿತಿ ಹಾಗಿಲ್ಲ. ಅತ್ಯುತ್ತಮ ಉಡುಪಿನಿಂದ ಬೀದಿ ಬೀದಿ ಮೆರೆಯುವವರಲ್ಲಿ ಈ ಗೌರವ ಯಾ ವ್ಯಕ್ತಿತ್ವವಿಲ್ಲ. ಸಿರಿವಂತರು, ರಾಜ ಮಹಾರಾಜರೆನಿಸಿದವರಲ್ಲೂ ಈ ಗೌರವವಿಲ್ಲ!

ಬದಲು ಯೋಗ್ಯ ಉಡುಪಿಲ್ಲದ ಸರಳ ವೃತ್ತಿಯ ಕೆಲವರಲ್ಲಿ ಇದು ತೋರಿಬರುತ್ತದೆ. ಶಾರೀರಕ ಬಲದಲ್ಲಿಯೂ, ಸೌಂದರ್ಯದಲ್ಲಿಯೂ ಲೆಕ್ಕಕ್ಕಿಲ್ಲದವರಲ್ಲಿ ಇದು ಕಂಗೊಳಿಸುತ್ತದೆ. ಗ್ರಿಸ್ ದೇಶದ ಸೋಕ್ರಟೀಸನು ಅತನ ಇಡೀ ದೇಶದ ಜನರಲ್ಲಿ ಅತ್ಯಂತ ವಿಕೃತ ರೂಪಿನವನು. ಆದರೆ ಅತನ ವ್ಯಕ್ತಿಗತ ಗಾಂಭೀರ್ಯಕ್ಕೆ ರಾಜ ಮಹಾರಾಜರೂ ಶಿರಬಾಗುತ್ತಿದ್ದರು! ಅತನ ವಾಕ್ಯಗಳು ಇಂದೂ ಕೂಡ ವೇದ ವಾಕ್ಯಗಳಂತೆ. ದೂರದ ಮಾತೇಕೆ? ನಮ್ಮ ದೇಶದ ಮಹಾ ನಾಯಕರಾದ ಮಹಾತ್ಮಾ ಗಾಂಧಿಯವರನ್ನೇ ತೆಗೆದುಕೊಂಡರೆ ಅವರ ಶರೀರದಲ್ಲಿ ಒಂದು ಹಿಡಿ ಮಾಂಸವಿರಲಿಲ್ಲ. ಆವರ ಶಾರೀರಕ ಸೌಂದರ್ಯವೂ ಹೇಳಿಕೊಳ್ಳುವಂತಿರಲಿಲ್ಲ ನಿರ್ಬಲರಾಗಿ ನಡೆಯುವುದೇ ಪ್ರಯಾಸವಾಗಿದ್ದರೂ ಅವರ ವ್ಯಕ್ತಿ ಗಾಂಭೀರ್ಯವೆಂತಹದು? ಅವರ ಶಿರಬಾಗಿದ ಕಡೆ ಸಹಸ್ರಾರು ಶಿರಗಳು ಬಾಗುತ್ತಿದ್ದವು. ಅವರು ಕೈ ಎತ್ತಿದ ಕಡೆ ಲಕ್ಷಾಂತರ ಕೈಗಳು ಧಾವಿಸುತ್ತಿದ್ದವು. ಅವರ ಕಾಲು ಮಟ್ಟಿದಂದೇ ಪುಣ್ಯಕ್ಷೇತ್ರವಾಯಿತು. ಅವರ ಮಾತೇ ಭಾರತೀಯರ ಮಂಗಳ ಗಾನವಾಯಿತು. ಹಾಗಾದರೆ ಈ ವ್ಯಕ್ತಿತ್ವ ಎಲ್ಲಿಂದ ಮತ್ತು ಹೇಗೆ?

ಅತೀ ಉನ್ನತ ಮಟ್ಟಕ್ಕೆ ಅಭಿವೃದ್ಧಿಗೊಂಡ ಮಾನಸಿಕ ಮತ್ತು ಆತ್ಮೀಕ ಗುಣಗಳು ಈ ವ್ಯಕ್ತಿ ಗೌರವದ ಮಹಾ ಗೋಪುರಕ್ಕೆ ಸಹಾಯಕವಾದ ಅಸ್ಥಿಭಾರ. ಮನುಷ್ಯನು ನಡೆಯುವ ನಡಿಗೆ, ಸಾಮಾನ್ಯವಾಗಿ ಅತನುನೋಡುವ ದೃಷ್ಟಿ, ಅತನ ಮಾತಿನ ರೀತಿ, ಸಮಾಜದಲ್ಲಿಯ ಅತನ ನಡತೆ, ಇವೆಲ್ಲವೂ ಕೂಡ ಅತನ ಮನಸ್ಸಿನಲ್ಲಿ ಯಾ ಹೃದಯದಲ್ಲಿ ಯಾವ ರೀತಿಯ ಭಾವನೆ ಇದೆ ಎಂಬುದನ್ನು ಪ್ರತಿಬಿಂಬಿಸುತ್ತವೆ. ಈ ಭಾವನೆಗನುಗುಣವಾಗಿಯೇ ಅತನು ಜನರಿಂದ ಒಲೈಸಲ್ಪಡುತ್ತಾನೆ ಇಲ್ಲವೇ ತಿರಸ್ಕರಿಸಲ್ಪಡುತ್ತಾನೆ. ಒಬ್ಬನು ಅತೀ ವೇಧಾವಿ ಇದ್ದು ಯಾವಾಗಲೂ ಉದಾತ್ತವಾದ ಭಾವನೆಗಳಲ್ಲಿ ಮಗ್ನನಾಗಿ ಅತೀ ಎತ್ತರದ ಮಟ್ಟದಲ್ಲಿದ್ದರೆ ಅತನು ತನ್ನ ಸುತ್ತ ಒಂದು ಪವಿತ್ರ ಹಾಗೂ ನಿಷ್ಕಲ್ಮಶ ವಾತಾವರಣವನ್ನು ಕಲ್ಪಿಸಿಕೊಳ್ಳುತ್ತಾನೆ. ಈ ವಾತಾವರಣವು ಹತ್ತಿರ ಬಂದವರನ್ನು ಆಕರ್ಷಿಸುವದು. ಆಕರ್ಷಿಸಲ್ಪಟ್ಟವರು ಒಳಗಿನ ಪವಿತ್ರತೆಯನ್ನು ಕಂಡು ಮೆಚ್ಚುವರು.

ಇಂಥಾ ಗೌರವವನ್ನು ವ್ಯಕ್ತಿಯು ಹೆಚ್ಚಿಸಿಕೊಳ್ಳುವದು ಸಾಧ್ಯವೇ? ವ್ಯಾಯಾಮದಿಂದ ಶರೀರದ ಸ್ನಾಯುಗಳನ್ನು ಹೆಚ್ಚಿಸಿಕೊಂಡಂತೆ ಇದನ್ನು ಬಹುಶಃ ಹೆಚ್ಚಿಸಿಕೊಳ್ಳಲು ಸಾಧ್ಯವಾಗದಿರಬಹುದು. ಈ ಗೌರವವನ್ನು ಬೆಳೆಸಿ ವ್ಯಕ್ತಿತ್ವವನ್ನು ರೂಪಿಸಲು ಯಾವದೇ ನಿಯಮವಿರಲಾರದು. ಯಾವದೇ ನಿಯಮವಿದ್ದರೆ ಅದು ಯಾಂತ್ರಿಕವಾಗಿ ಕ್ರಮಶಃ ಶಿಥಿಲಗೊಳ್ಳುವದು. ಆದ್ದರಿಂದ ಆ ಶಕ್ತಿಯನ್ನು ಹೆಚ್ಚಿಸಿಕೊಳ್ಳುವದು ಪ್ರತಿಯೊಬ್ಬನಿಗೆ ಸಾಧ್ಯವಿದೆ. ಮನಸ್ಸು, ಹೃದಯ, ಆತ್ಮಗಳ ಪಾವಿತ್ರ್ಯತೆಯೇ ಇದರ ತಳಹದಿ. ಆರೋಗ್ಯಕರ ಮತ್ತು ಅವಿರೋಧಕ ವ್ಯಕ್ತಿತ್ವವು ದೊರೆಯಬೇಕಾದರೆ ಈ ಆಂತರಿಕ ಪಾವಿತ್ರ್ಯತೆ ವಿಲ್ಲದೆ ನಡೆಯದು. ನಮ್ಮ ಭಾವನೆಗಳು, ಕೃತಿಗಳು, ನಡೆನುಡಿಗಳು ನೀತಿರೀತಿಗಳಿಗನುಗುಣ ಮೇಲ್ಮಟ್ಟವಾಗಿದ್ದರೆ ಅವುಗಳನ್ನೊಳಗೊಂಡಿರುವ ವ್ಯಕ್ತಿಯೂ ಮೇಲ್ಮಟ್ಟಕ್ಕೇರಲೇ ಬೇಕು. ನಮ್ಮ ಗುಣ, ನೀತಿಗಳಲ್ಲಿ, ಮಾತು ನಡೆಗಳಲ್ಲಿ ಕಲಂಕವಿಲ್ಲದೆ ಅವು ಬೆಳಗುತ್ತಿದ್ದರೆ ಅವುಗಳಿಂದ ಕೂಡಿದ ವ್ಯಕ್ತಿಯೂ ತೇಜಸ್ಸಿನಿಂದ ಬೆಳಗುವನು.

ನಾವು ಅನೇಕರನ್ನು ನೋಡಿದ್ದೇವೆ. ಯಾವ ಭೌತಿಕ ದೃಷ್ಟಿಯಿಂದಲೂ ಅವರಿಗೆ ನ್ಯೂನತೆ ಇಲ್ಲ. ಆರೋಗ್ಯವಿದೆ. ದುಡ್ಡಿದೆ. ಸುಖಸಂಸಾರವಿದೆ. ಆದರೂ ಅವರು ಮಂಕಾಕೃತಿ ಯಾವಾಗಲೂ ಉದ್ದವೇ! ನಗುವಿನ ಹೊನಲು ಹರಿಯದು. ಕಣ್ಣಿನಲ್ಲಿ ವಿಂಚು ಹೊಳೆಯದು. ಆ ನಾಸಕ್ತಿಯು ಕುರುಹು ಎದ್ದು ತೋರುವದು. ಇದಕ್ಕೆ ಕಾರಣ ಅವರ ಶಾರೀರಕ ಸುಖ ಸೌಲಭ್ಯಗಳೊಡನೆ ಅವರ ಆತ್ಮೀಕ ಗುಣಗಣಗಳು ಬೆಳೆಯದಿದ್ದೇ ಆಗಿದೆ. ಸದುಪಯೋಗ ಮಾಡಲು ತಿಳಿಯದವನ ಕೈಯ ಧನದಿಂದ ಗಂಡಾಂತರವೇ ಹೆಚ್ಚು. ಶರೀರ ಮತ್ತು ಆತ್ಮಗಳು ಒಂದಕ್ಕೊಂದು ವಿಲನವಾಗಿರಬೇಕು, ಶರೀರಕ್ಕೆ ಯೋಗ್ಯ ಆಹಾರ ಕೊಟ್ಟು ಪೋಷಿಸುವಂತೆಯೇ ಆತ್ಮದ ಕನ್ನಡಿಯು ಶುಭ್ರವಾಗಿರುವಂತೆ ಎಚ್ಚರಿಕೆ ವಹಿಸಬೇಕು. ಶರೀರದೊಂದಿಗೆ ಹೃದಯದ ವಿಲನ ವಿರಬೇಕು. ಅರ್ಥಾತ್ ಪವಿತ್ರ ಹೃದಯವು ಇಚ್ಛಿಸಿದುದೇ ಭಾವಿಸಲ್ಪಡಬೇಕು. ಆ ಭಾವನೆಯನ್ನೇ ಶರೀರವು ಕಾರ್ಯರೂಪದಲ್ಲಿ ತರಬೇಕು. ಈ ಕಾಯ ವಾಚಾ ಮನಸುಗಳ ಸಮ್ಮಿಲನವೇ ವ್ಯಕ್ತಿಯ ಗೌರವದ ಮೂಲ.

ಆನಂದವು ಮುಖ ಕನ್ನಡಿಯನ್ನು ತೊಳೆದು ಶುಭ್ರವಾಗಿ ಬೆಳಗಿಸುವ ಅಮೂಲ್ಯವಸ್ತು. ಸುಂದರ ಭುವನ ನೋಹಕ ಮುಖಾರವಿಂದವಿದ್ದರೆ ಸಾಲದು. ಪವಿತ್ರವಾದ ಹೃದಯ ಜ್ಯೋತಿಯು ಬೆಳಕು ಈ ಸುಂದರ ಮುಖಪಟಲದಲ್ಲಿ ಪ್ರತಿಬಿಂಬಿತವಾಗಬೇಕು. ಅನೇಕರಲ್ಲಿ ಸುಂದರ ಆಕಾರವಿದೆ. ಸೌಂದರ್ಯವಿದೆ. ಆದರೆ ಈ ತೇಜಸ್ಸಿಲ್ಲ. ಕಾರಣ ಅವರು ಬತ್ತಿ ಇಲ್ಲದ ದೀಪದಂತೆ! ಯಾರೂ ಅದರ ಹತ್ತಿರ ಸುಳಿಯರು! ಪವಿತ್ರ ಆತ್ಮದ ಪ್ರೇಮದ ಹಣತೆ ಮುಖದಲ್ಲಿ ಅಪೂರ್ವ ಬೆಳಕನ್ನು ಚೆಲ್ಲಿದ್ದರೆ ಆ ಮುಖವು ಕೂರೂಪವಾಗಿದ್ದರೂ ಜನರನ್ನು ಸೆಳೆಯುವದು. ಜನತೆ ಅದರ ಗೌರವವನ್ನರಿತು ವಂದಿಸುವ[illegible]ಕಷ್ಟದಲ್ಲಿ, ಸುಖದಲ್ಲಿ ವ್ಯತ್ಯಾಸವಿ ಸ್ವಾರ್ಥದ ಕಲಂಕದಿಂದ, ಮೋಹದಿಂದ ನಿರ್ಲಿಪ್ತವಾದ ಪ್ರೇಮವತ್ತಿರೆ ಅದಕ್ಕೆಣೆಯು ಜಗತ್ತಿನಲ್ಲಿವ ಮೂರು ಸಹಜ.

ಎರಡು[illegible]ನರ್ಥ

ಮಾರ್ಗದ[illegible]

ತಿಯೊಂದು ತೆಲಸ ಮತ್ತು ವಸ್ತುವಿನ ನ್ಯೂನತೆಯನ್ನು ಹುಡುಕುವವರು ಒಂದು ಪಂಗಡ! ಇವರ ದೃಷ್ಟಿ ಆಕಾಶದ ಮೂಲೆಯಲ್ಲಿರುವ ಕಪ್ಪಡರಿದ ಮೋಡದೆಡೆ. ದಿವ್ಯ ಪ್ರಕಾಶದಿಂದ ಮೆರೆಯುವ ಸೂರ್ಯನನ್ನು ನೋಡಿ ಆನಂದಿಸುವ ಭಾಗ್ಯ ಇವರಿಗಿಲ್ಲ. ಅವರ ತತ್ವದಂತೆ ಜಗತ್ತಿನಲ್ಲಿರುವ ಪ್ರತಿಯೊಬ್ಬನೂ ತಮ್ಮ ವಿರೋಧಿ. ನೀತಿ ನಡತೆ ಎಲ್ಲಿಯೂ ಇಲ್ಲ. ಎಲ್ಲರೂ ತಮ್ಮ ವೇಲೆ ಕತ್ತಿಕಟ್ಟಲಿರುವವರೇ! ಎರಡನೇಯ ಪಂಗಡದವರ ಜೀವನ ನೋದ ಕಬ್ಬಿನ ಸಿಪ್ಪೆಯಂತೆ! ಜೀವನದಲ್ಲಿ ನೀರಸ. ಅನಾಸಕ್ತಿ. ಜಡತೆಯೇ ಶಾಂತಿಯೆಂದೂ ಕೈಸಾಗದಿರುವದೇ ಅನಾಸಕ್ತಿಯೆಂದೂ ಭಾವಿಸುವವರು! ಇವರಿಬೆಲೋಕವೇ ಅರ್ಥರಹಿತವಾದುದು.

ಜೀವನವು ಒಂದು ಪ್ರಯೋಗ. ಈ ಪ್ರಯೋಗ ಶಾಲೆಯಲ್ಲಿ ಕಷ್ಟಸುಖಗಳ ಪುಶಕ್ಕಿಟ್ಟು ಪರಿಶುದ್ಧ ಆತ್ಮನನ್ನು ಬೆಳಗಬಲ್ಲವನೇ ಗಾರವಾನ್ವಿತನಾಗುವನಲ್ಲದೆ ಸುಖಸಂಪತ್ತುಗಳಿಂದ ತುಕ್ಕು ಹಿಡಿದು ಮೂಲೆಸೇರುವವನಲ್ಲ. ಆತ್ಮದ ಬೆಳಕಿನಲ್ಲಿ ಕಲ್ಮಷಗಳ ಹೋಮವಾಗಿ ತೇಜಪುಂಜವಾದ ಅಂತರ್ಜ್ಯೋತಿಯು ಶರೀರವನ್ನು ಬೆಳಗಬೇಕು. ಹಾಗೆ ಬೆಳಗುತ್ತಿದ್ದರೆ ಚಳಿಯಿಂದ ನಡುಗುವವರಿಲ್ಲರೂ ಚಳಿಕಾಯಿಸಲು ಹತ್ತಿರ ಬರುತ್ತಾರೆ. ತಮ್ಮ ಶರೀರಕ್ಕೆ ಕಾವನಿತ್ತು ಜೀವನ ಕೂಡಿಸಿದ ಬೆಳಕನ್ನು ಹೊಗಳಿ ಪ್ರಾರ್ಥಿಸುತ್ತಾರೆ.

ಈ ಗುರಿಗೆ ಸೇರಲು ಜೀವನ ಸರಳವಾಗಬೇಕು. ಹೊನ್ನು, ಘನತೆ, ಪ್ರತಿಷ್ಠೆಗಳ ಭಾರ ಹೊತ್ತವನು ದೂರ ನಡೆಯಲಾರ! ಪ್ರತಿ ದಿನವೂ ಜೀವನದ ಕಡೇ ದಿನವೆಂಬಂತೆ ಜೀವಿಸಬೇಕು. ಸುತ್ತಮುತ್ತಿರುವವರೆಲ್ಲರ ಆನಂದಕ್ಕೆ ಕಾರಣವಾದ ಜೀವನವಾಗಬೇಕು. ಈ ಮಾರ್ಗವೇ ವ್ಯಕ್ತಿಯ ಗೌರವದ ಮಾರ್ಗ. ಮನುಷ್ಯನ ಗುಣದ ಅಮೂಲ್ಯ ರತ್ನ ಕೃತಜ್ಞತೆ. ಕೃತಜ್ಞತೆ, ವಿನಯ ಗುಣಗಳು ಯಾರನ್ನೂ ಘನತೆಗೇರಿಸದೆ ಬಿಟ್ಟಿಲ್ಲ.

ಜನಜೀವನದಲ್ಲಿ

ಅನೈತಿಕತೆ ಏಕೆ?

ಕಳೆದ ಎರಡು ಮೂರು ವರ್ಷಗಳಿಂದಲೂ, ಅನೈತಿಕತೆ, 'ಕರಪ್‌ಶನ್' ದೇಶದಲ್ಲಿ ಹೆಚ್ಚಿ ಹೋಗಿದೆ. ಇದು ಅಳಿಯಬೇಕು ಎಂಬ ಸೊಲ್ಲು ಕೇಳಿಬರುತ್ತದೆ. ಯಾವ ಧಾರಣಾ ಮಾತುಗಳನ್ನೇ ಕೇಳಲಿ, ಯಾವ ನೃತ್ಯಪತ್ರಿಕೆಗಳನ್ನೇ ಓದಲಿ, ಜನಜಂಗುಳಿಯು ಯಾವ ಗಂಪನ್ನೇ ನೋದಲಿ, ಈ 'ಅನೈತಿಕತೆ, 'ಕರಪ್‌ಶನ್' ಮಾತುಗಳು ಇಲ್ಲದೆ ಇಲ್ಲ. ಜನ ಜೀವನದಲ್ಲಿ ಅವರು (ಅಧಿಕಾರಿಗಳಿರಲಿ ಅಥವಾ ಅನಧಿಕಾರಿಗಳಿರಲಿ) ಯಾರೇ ಇದ್ದರೂ ಅನೈತಿಕತೆಯಿಂದ ಅಲಿಪ್ತರಾಗಿದವರು ಇಲ್ಲವೇ ಇಲ್ಲವೇನೋ ಎಂದು ಸಂಶಯ ಬರುವಷ್ಟರ ಮಟ್ಟಿಗೆ ಅದರ ವ್ಯಾಪ್ತಿಯು ಹೆಚ್ಚಿ ಹೋಗಿದೆ. ಇದು ಹೀಗೇಕೆ? ಎಂದು ನಮಗೆ ನಾವೇ ಕೇಳಿಕೊಂಡರೆ ಅದಕ್ಕೆ ಏನು ಉತ್ತರ ಬರಬಹುದು?

ಅಡೆ ತಡೆಗಳು.

ಸಾಮಾನ್ಯ ಜನತೆಯನ್ನು ಅಡ್ಡ ಮಾರ್ಗಕ್ಕೆ ಹಚ್ಚುವ ಮೊಟ್ಟ ಮೊದಲನೆಯ ಮಾರ್ಗವೆಂದರೆ, ಅನ್ನ ಬಟ್ಟೆಗಳ ಸಂಪಾದನೆಯ ದೈನಂದಿನ ಕಾರ್ಯರಂಗದಲ್ಲಿ ಬರುವ ಅಡೆತಡೆಗಳೆಂದೇ ಹೇಳಬೇಕು. ಯಾವದೇ ಒಂದು ದೇಶದಲ್ಲಿ, ಅಲ್ಲಿಯ ನೈತಿಕ ಮಟ್ಟವನ್ನು ಅಲ್ಲಿಯ ಕಾಯಿದೆ ಕಾನೂನುಗಳಿಂದ ನಿರ್ಧರಿಸಬಹುದೆಂದೂ, ಎಷ್ಟು ಎಷ್ಟು ಹೆಚ್ಚು ಅವುಗಳಿರುವವೋ ಆ ಅಷ್ಟು ನೈತಿಕ ಮಟ್ಟವು ಗಂಡಾಂತರದಲ್ಲಿರುವುದೆಂದೂ ಒಬ್ಬ ತಜ್ಞರು ತಮ್ಮ ಅಭಿಪ್ರಾಯಪಟ್ಟಿದ್ದಾರೆ.

ಇದು ಒಬ್ಬ ಸಾಮಾನ್ಯ ಮಾನವನ ಮೇಲೆ ಹಾಕಿರುವ ಕಟ್ಟಳೆ ಆತನ ಜೀವನದಲ್ಲಿ ಅನೇಕ ಸಂದರ್ಭಗಳಲ್ಲಿ, ಹೇರಿ ಬರುವಂತೆ ಮಾಡಿದೆ. ತನ್ನ ಮಿತ್ರರಿಂದ, ಆಪ್ತರಿಂದ, ಜನನು ಆಹಾರಧಾನ್ಯದ ನೆರವನ್ನು ಪಡೆಯುವಂತಿಲ್ಲ. ಧನದ ನೆರವನ್ನೂ (ಸಾಲವಾಗಿ) ಪಡೆಯುವಂತಿಲ್ಲ. ಹೀಗೆ ಏಕಾಕಿಯಾಗಿ, ಒಂಟಿ ವೀರನಂತೆ ಬಾಳ ಸಮರದಲ್ಲಿ ಅವನು ಹೋರಾಡಬೇಕಾಗುತ್ತದೆ. ಇಂದು ನಮ್ಮಲ್ಲಿ ಸಾಮಾನ್ಯ ಮಾನವನಗಳಿಕೆಯಾದರೂ ಅವನ ಜೀವನ ವೆಚ್ಚವನ್ನು ನಿರ್ವಹಿಸುವಷ್ಟು ಸಮರ್ಪಕವಾಗಿ ದೆಯೆನ್ನಬೇಕೇ? ಅದೂ ಇಲ್ಲ. ಹೀಗೆ ಅವನು ಸರ್ವ ಬಗೆಯಿಂದಲೂ ನಿಸ್ಸಹಾಯನಾದಾಗ, ವಾಮ ಮಾರ್ಗಕ್ಕೆಳೆಯುವುದು ಮಾನವೀ ಸ್ವಭಾವ ಸಹಜವಾದ ಮಾತೇ ಆಗಿದೆಯೆಂದರೆ ತಪ್ಪಾಗದು. ಹೀಗೆ ಮಾಡದೆ ಎಂತಹ ಅಡೆತಡೆಗಳಲ್ಲಿಯೂ, ಕಷ್ಟನಷ್ಟಗಳಲ್ಲಿಯೂ, ವಾಮ ಮಾರ್ಗಕ್ಕೆ ಳೆದವರೂ ಇಲ್ಲದಿಲ್ಲ. ಆದರೆ ಅವರ ಸಂಖ್ಯೆ ಬಹಳ ಕಡಿಮೆ.

ಕಳ್ಳಪೇಟೆ.

ಕಳ್ಳಪೇಟೆಗೆ ಮುಖ್ಯವಾಗಿ ಈ ಕೊರತೆಯೇ ಕಾರಣವಾಗಿರುವುದೆಂದರೆ ತಪ್ಪಾಗದು. ಮತ್ತು ಸಾಕಷ್ಟು ಗಳಿಸುವ ಮೋಹಕತೆಯೂ ಈ ಕಳ್ಳಪೇಟೆಯ ಆಕರ್ಷಣವಾಗಿರುತ್ತದೆ. ಸರಕಾರದಿಂದ ಸಂಗ್ರಹಿತವಾಗಿ ರೇಶನ್ ದ್ವಾರಾ ಸಾರ್ವಜನಿಕರಿಗೆ ಪೂರೈಸಲಾಗುತ್ತಿದ್ದ ಆಹಾರ ಧಾನ್ಯ, ಅರಿವೆಗಳಲ್ಲಿಯೂ, ಈ ಕಳ್ಳಪೇಟೆಯಲ್ಲಿ ದೊರಕುತ್ತಿದ್ದ ಆಹಾರ ಧಾನ್ಯ ಅರಿವೆಗಳಲ್ಲಿಯೂ, ತುಂಬಾ ವ್ಯತ್ಯಾಸವುಂಟು. ರೇಶನ್‌ದಲ್ಲಿ ದೊರೆಯುತ್ತಿದ್ದ ಆಹಾರ ಧಾನ್ಯಗಳು, ಅರಿವೆ ನೊಪಲಾದವುಗಳು ಅಷ್ಟು ಒಳ್ಳೆಯವಾಗಿರುವದಿಲ್ಲ. 'ಅನಿವಾರ್ಯವಾದ ಸಂಧಿಗ್ಧ ಘಕಟ್ಟಿನಿಂದ ಕೃತಿಗಳನ್ನು, ಅರಿಯುವುದಕ್ಕಿಲ್ಲ, ತರ್ಕಗತಿಯಲ್ಲಿ. ಕಾದಿಡುವುದರಲ್ಲಿ ತುಂಬಾ ಅಲಕ್ಷತೆಯು ಬೆಳೆದು ಹೋಗಿ, ಆಕರ್ಷಕತೆಯು ಅಳಿದು ಹೋಗಿರುತ್ತದೆ. ಆದರೆ ಕಳ್ಳಪೇಟೆಯ ಆಹಾರಧಾನ್ಯ ಅರಿವೆಗಳು 'ವ್ಯಾಪಾರ'ದ ಕಾರಣವಾಗಿ ಒಳ್ಳೆಯ ರೀತಿಯಿಂದ ಅರಿಸಿದ, ಕಾದಿಟ್ಟವುಗಳಾಗಿರುವುದರಿಂದ ಆಕರ್ಷಣೆಯು ಅವುಗಳಲ್ಲಿ ಹೆಚ್ಚು. ಹೀಗಾಗಿ ಸಾಮಾನ್ಯ ಜನತೆಯು ಕಳ್ಳಪೇಟೆಗೆ ಬಲಿ ಬೀಳುತ್ತಿದೆ.

ಎರಡು ಮುಖಗಳು.

ಸಾಮಾನ್ಯವಾಗಿ, ಆಹಾರ ಧಾನ್ಯ ಮತ್ತು ಅರಿವೆಗಳು, ಸರಕಾರದಿಂದ ಸಾರ್ವಜನಿಕರಿಗೆ, ಎರಡು ಮುಖಗಳಿಂದ ಹೊರೆಯುತ್ತವೆ. ಒಂದನೆಯದು ಸಹಕಾರಿ ಸಂಘಗಳಿಂದ, ಎರಡನೆಯದು ಲೈಸನ್ಸ್ ಪಡೆದ ಖಾಸಗಿ ವ್ಯಕ್ತಿಗಳಿಂದ ಸಂಘಗಳಲ್ಲಿನೈತಿಕತೆಯಿಂದ ಆಸ್ತಿಯು ಅಭಾವದಿಂದ ಹಾಗೂ ಖಾಸಗಿ ವ್ಯಕ್ತಿಗಳಲ್ಲಿ, ತನ್ನನ್ನು ಬಿಟ್ಟು ಉಳಿದ ಕಡೆಗೆ ವ್ಯಾಪಾರ ನಡೆಯುವುದೆಂಬ ಭರವಸೆಯಿರುವುದರಿಂದ, ಆಹಾರ ಧಾನ್ಯ ಹಾಗೂ ಅರಿವೆಗಳ, ಅರಿಸುವಿಕೆ, ಇಡುವಿಕೆ, ತೋರಿಸುವಿಕೆ ಮೊದಲಾದವುಗಳಲ್ಲಿ ಆಲಕ್ಷತನವು ಬೆಳೆಯುವುದು ಸ್ವಾಭಾವಿಕವಾದ ಮಾತಾಗಿದೆ.

ಅನೇಕ ನಿಯಮ ನಿರ್ಬಂಧಗಳಿರುವುದರಿಂದಲೂ, ಹಾಗೂ ಒಬ್ಬೇ ಜಂಗಡಿಯಲ್ಲಿ ಗ್ರಾಹಕರ ಸಂಖ್ಯೆಯು ಸಾಕಷ್ಟಕ್ಕಿಂತ ಹೆಚ್ಚು ಇರುವುದರಿಂದಲೂ, ಎಲ್ಲಕ್ಕೂ ಮುಖ್ಯವಾಗಿ ಜಂಗಡಿಯ ವ್ಯವಸ್ಥಾಪಕರ ನೌಕರರ ಅನಾಸ್ಥೆಯ ಪರಿಣಾಮದಿಂದಲೂ, ಗ್ರಾಹಕರಲ್ಲಿ, ಅಕರ್ಷಣೆಯು ಹುಟ್ಟದೇ ಹೋಗುವುದು, ಕಾಲ ವಿಲಂಬವೂ ಇದಕ್ಕೊಂದು ಕಾರಣವೇ. ಒಂದೊಂದು ವಾರದ ರೇಶನ್ ತರಲಿಕ್ಕಾಗಿ ಇಡೀ ಒಂದೊಂದು ದಿನವೂ ಜಂಗಡಿಯ ಬಾಗಿಲಲ್ಲಿ ಕಾಯುತ್ತ ಕೂಡುವ ಪ್ರಸಂಗಗಳು ಆಗಾಗ ಬರುತ್ತಿರುವುದು ವಾಡಿಕೆಯ ಮಾತಾಗಿದೆ. ಇದೇ ಬಗೆಯನ್ನೇ ಅರಿವೆಯ ಬಗ್ಗೆಯೂ ನಾವು ಕಾಣಬಹುದಾಗಿದೆ.

ಬೇಸರ.

ಇಷ್ಟು ನಿಯಮ ನಿರ್ಬಂಧಗಳಿದ್ದೂ ಒಣಿ ಒಣಿಯಲ್ಲಿ ಮನೆಬಾಗಿಲಿಗೇ ಬಂದು ಆಹಾರಧಾನ್ಯ ಅರಿವೆಗಳನ್ನು ಮಾರುವ ಕಳ್ಳಪೇಟೆಗಾರರು ಕಡಿಮೆಯೇನಿಲ್ಲ. ಮೊದಲೇ ಬೇಸರಪಟ್ಟುಕೊಂಡಿದ್ದ ಜನತೆ, 'ತೋಯಿಸಿಕೊಂಡಿದ್ದವನಿಗೆ ಮಳೆಯ ಹೆದರಿಕೆ ಏನು?' ಎಂಬ ನ್ಯಾಯದಂತೆ, ಬೆಲೆ ತುಸು ಹೆಚ್ಚಾದರೂ, ಅನಾಯಾಸವಾಗಿ ದೊರಕುವ, ಹಾಗು ಒಳ್ಳೆಯವಿದ್ದ ಆಹಾರ ಧಾನ್ಯ, ಅರಿವೆಗಳ ಈ ಕಳ್ಳಪೇಟೆಗೆ ಬಲಿ ಬೀಳುತ್ತಾರೆ.

ಒಂದು ವೇಳೆ ಯಾರಾದರೊಬ್ಬರು ಈ ಕಳ್ಳಪೇಟೆಯ ಬಗ್ಗೆ ಅಧಿಕಾರಿಗಳಲ್ಲಿ ದೂರು ಒಯ್ಯುವ ಕಾರ್ಯ ಮಾಡಿದರೆ ಕಾಯಿದೆಯಂತೆ ಅವನೇ ಎಲ್ಲವನ್ನೂ, ಅಧಿಕಾರಿಗಳೆದುರು ಸಿದ್ಧಪಡಿಸುವ ಜೊಹೆ ಬೀಳುವುದು. ಹೀಗೆ ಮಾಡಿದರೂ ಕೂಡ ಎಷ್ಟೋ ವೇಳೆ ಅಪರಾಧಿಯು ಅಪರಾಧವು ಸಿದ್ಧವಾಗಲಿಲ್ಲವೆಂದೋ ಅಥವಾ ಇನ್ನಾವ ಕಾರಣದಿಂದಲೋ ಕಾಯಿದೆಯಂತೆ ಅವರ ಮೇಲೆ ಏನೂ ಪರಿಣಾಮ ವಾಗದೆ ಹೋದ ಉದಾಹರಣೆಗಳೂ ಉಂಟೆಂದೂ ಹೇಳುತ್ತಾರೆ. ಮೇಲಾಗಿ ಇಷ್ಟೆಲ್ಲ ಪ್ರಯತ್ನ ಮಾಡುವ ಖಟ್ಪಾಟೋಪಕ್ಕೆ ಸಾರ್ವಜನಿಕರು, ಏಕೆ ಹೋಗಬೇಕೆಂದು ಬೇಸರಪಟ್ಟುಕೊಳ್ಳುವುದೂ ಉಂಟು.

ಪರಿಣಾಮ.

ಹೀಗೆ ನಿಯಮ ನಿರ್ಬಂಧಗಳ ಅಡೆತಡೆ, ಅಭಾವದ ಹಾಗೂ ಕೊರತೆಯ ಪ್ರಾಬಲ್ಯ, ಅನಾಸ್ಥೆಗಳಿಂದ ಜನಜೀವನದಲ್ಲಿ ಅನೈತಿಕತೆಯು ಬೇರು ಬಿಡುತ್ತಲಿದೆ. ಈ ಜೇರನ್ನು ಕತ್ತರಿಸಲು ಸರಕಾರವೂ, ಧುರೀಣರೂ, ಪ್ರಯತ್ನಿಸುತ್ತಲೂ, ಇದ್ದಾರೆ. ಆದರೆ ಬರೀ ಒಮ್ಮುಖದಿಂದ ಈ ಕಾರ್ಯವು ಇಷ್ಟು ದಿನಗೆ ಸಾಧ್ಯವಾದೆ ಹೋಗಿದೆ. ಸರಕಾರವೂ ಜನತೆಯೂ ಕೂಡಿಯೇ ಪ್ರಯತ್ನಿಸಬೇಕಿದೆ. ಪ್ರಾಮಾಣಿಕತೆಯಿಂದ ಪ್ರಯತ್ನ ಮಾಡಿದಲ್ಲಿ, ಈ ಅನೈತಿಕತೆಯು ಅಳಿಯಲಾರದೇನೂ ದೊಡ್ಡ ಮಾತಾಗಿಲ್ಲ. ಆದರೆ ಅದಕ್ಕೆ ಕಾಲವು ಕೂಡಿ ಬರಬೇಕಾಗಿದೆ.

ನೆನ್ನೆ ನೊನ್ನೆ ಕಾತ್ಮೀರದಲ್ಲಿ ಒಬ್ಬ ಕಳ್ಳಪೇಟೆಯು ಸಂಗ್ರಹಕಾರನಿಗೆ ಸಾರ್ವಜನಿಕರ ಸಮಕ್ಷಮ ಘಟಕಿಸಿ(ಚಚ್ಚಿ)ನೆಟ್ಟು ಶಿಕ್ಷೆಯನ್ನು ಕೊಟ್ಟರೆಂದು ಪ್ರಕಟವಾಗಿದೆ. ಇದೊಂದು ಶುಭಚಿಹ್ನವೆಂದೇ ಹೇಳಬೇಕು. ಎಲ್ಲ ಕಡೆಗೂ ಹೀಗೆ, ನಿರ್ದಾಕ್ಷಿಣ್ಯವಾಗಿ, ಸಾರ್ವಜನಿಕರ ಸಮಕ್ಷಮದಲ್ಲಿ, 'ಅನೈತಿಕತೆ'ಗೆ ಪೆಟ್ಟು ಬೀಳುತ್ತ ಹೋದಲ್ಲಿ, ಜನರು ಭಯದಿಂದಲಾದರೂ ಆ ಮಾರ್ಗಕ್ಕೆ ಎಳೆಸಲಾರರೆಂದು ಅನ್ನಬೇಕಾಗುತ್ತದೆ. ಸರಕಾರವು, ನ್ಯಾಯನಿಷ್ಠುರತೆಯಿಂದ ಹಾಗೂ ನಿರ್ದಾಕ್ಷಿಣ್ಯದಿಂದ, 'ಅನೈತಿಕತೆ'ಯನ್ನು ಕಠಿಣವಾಗಿ ಶಿಕ್ಷಿಸಬೇಕು. ಈ ಕಾರ್ಯದಲ್ಲಿ ಜನತೆಯೂ ತನ್ನ ಪ್ರಾಮಾಣಿಕ ಬೆಂಬಲವನ್ನು ಕೊಡಬೇಕು. ಹೀಗಾದರೆ 'ಅನೈತಿಕತೆ'ಯು ಭೂತದ ಉಚ್ಚಾಟನೆಯಂತೆ, ಶೀಘ್ರವೆ ಉನ್ನತಿಗೇರಲು ಅವಮಾನಗೊಳ್ಳುವುದು.

'ಜೈಹಿಂದ್.'

ಮಾರಾಟಕ್ಕಿದೆ.

ಸಂಪಾಜೆಯ ಹತ್ತಿರ ಕೊಯನಾಡು ನ್ಯಾಮದಲ್ಲಿದ್ದ ಮಡಿಕೇರಿ ನಂಗಳೂರು ರಸ್ತೆಯ 16ನೇ ಮೈಲು ಕಲ್ಲಿನ ಬಳಿ ಇರುವ ಆರು ಏಕರೆ ವ್ಯವಸಾಯದಲ್ಲಿರುವ ಸಾಗಿನ ನೀರಾವರಿ ಭೂಮಿ, ಸುಮಾರು ಎರಡು ಏಕರೆ ಭೂಮಿ ಮಾಡಲು ಆನು ಕೂಲವಾಗ ಹಡ್ಲು, ದೊಡ್ಡ ರಸ್ತೆಯ ಬಳಿಯಲ್ಲಿ ಎರಡು ಅಂಗಡಿ ಮನೆ ಅದಕ್ಕೆ ಸೇರಿದ ಮೂರು ಏಕರೆ ತೆಂಗು, ಅಡಕೆ ಇದ್ದು ವರ್ಷಕ್ಕೆ ರೂ. 600/— ಉತ್ಪತ್ತಿ ಇರುವ ತೋಟ. ಇವು ಮಾರಾಟಕ್ಕಿವೆ ಬೆಲೆ 7,500/— ಯೂ ಸವಿೂಪ. ಖರೀದಿದಾರರು ಈ ಕೆಳಗಿನ ವಿಳಾಸಕ್ಕೆ ಬರೆದು ವಿಚಾರಿಸಬಹುದು.

ಕೆ. ಎಂ. ಸೋಮಯ್ಯ
ಹೊದ್ದೂರು,
ಮೂರ್ನಾಡು.

1-1

ಕೊಡಗಿನ ಸಂಯೋಜನೆಯ ಮೂತಿಲ್ಲ.

ಭಾಷಾನುವಾರು ಪ್ರಾಂತ ರಚನೆ ತತ್ಕಾಲಕ್ಕಿಲ್ಲ.

ಕೊಡಗಿನ ಕಾಂಗ್ರೆಸಿಗರು ಒಗ್ಗಟ್ಟಾಗಬೇಕು.

ಸಂಸ್ಥಾನ ಇಲಾಖೆಯ ಕಾರ್ಯದರ್ಶಿ ಶ್ರೀ. ವಿ. ಪಿ. ಮೆನನರ ಭಾಷಣ.

ಇಂಡಿಯೂ ಸರಕಾರದ ಸಂಸ್ಥಾನ ಇಲಾಖೆಯ ಸೆಕ್ರೆಟರಿಯವರಾದ ಶ್ರೀ. ವಿ. ಪಿ. ಮೆನನ್‌ರವರು ಕೊಡಗಿಗೆ ಈ ತಾ. ೧೧ ರಲ್ಲಿ ಬರುವರೆಂಬ ವಾರ್ತೆ ಈ ಮೊದಲು ಪ್ರಕಟವಾಗಿದ್ದರೂ, ಕಾರಣಾಂತರಗಳಿಂದ ಅವರು ಎಂಡು ದಿನ ಮುಂಚಿತವಾಗಿಯೇ ಅಂದರೆ ತಾ. ೯ ರ ಸಾಯಂಕಾಲ ಬೆಂಗಳೂರಿನಿಂದ ಮಡಿಕೇರಿಗೆ ಬಂದರು. ಅವರೊಂದಿಗೆ ಅವರ ಪತ್ನಿಯವರೂ ಅವರ ಖಾಸಗಿ ಕಾರ್ಯದರ್ಶಿ ಶ್ರೀ. ಅನಂತಕೃಷ್ಣರವರೂ ಬಂದಿದ್ದರು. ಇವರು ಚೀಫ್ ಕಮಿಷನರ ಅತಿಥಿಯಾಗಿ ಮಡಿಕೇರಿ 'ಗೆಸ್ಟ್‌ಹೌಸ್'ನಲ್ಲಿ ಉಳಿದುಕೊಂಡಿದ್ದರು.

ಮರುದಿನ ಬೆಳಿಗ್ಗೆ ಅವರ ಪತ್ನಿಯವರೂ, ಖಾಸಗಿ ಕಾರ್ಯದರ್ಶಿಯವರೂ ಭಾಗಮಂಡ್ಲ ಮತ್ತು ತಲಕಾವೇರಿಗೆ ಹೋಗಿದ್ದರು. ಶ್ರೀ. ಮೆನನ್‌ರವರು 'ಗೆಸ್ಟ್ ಹೌಸಿ'ನಲ್ಲೇ ಇದ್ದು ಬೆಳಿಗ್ಗೆ ೧೦ ಗಂಟೆಯಿಂದ ಮಧ್ಯಾಹ್ನ ೧ ಗಂಟೆಯ ವರೆಗೂ, ಮಧ್ಯಾಹ್ನ ೨-೩೦ ಗಂಟೆಯಿಂದ ೪ ಗಂಟೆಯ ವರೆಗೂ ಕೊಡಗಿನ ಹಲವು ಮುಖಂಡರಿಗೆ ಸಂದರ್ಶನೆಯ ಅವಕಾಶವಿತ್ತು ಅವರೊಡನೆ ಮಾತುಕತೆ ನಡೆಸಿದರು. ಹೀಗೆ ಸುಮಾರು ೭೦ ಜನರು ಅವರನ್ನು ಕಂಡರು.

ಮಡಿಕೇರಿಯಲ್ಲಿ ಹಾಜರಿದ್ದ ಎರಡೂ ಪಕ್ಷದ ಏಳು ಕೌನ್ಸಿಲು ಸದಸ್ಯರನ್ನು ಬೆಳಿಗ್ಗೆ ೧೧¼ ಗಂಟೆಗೆ ಕರೆಸಿಕೊಂಡು ಕೊಡಗಿನ ಭವಿಷ್ಯತ್ತು ಮತ್ತು ಆಡಳಿತ ವಿಚಾರಗಳನ್ನು ಕುರಿತು ಸುಮಾರು ೧½ ಗಂಟೆಯ ಕಾಲ ಚರ್ಚಿಸಿದರು.

ಸಾಯಂಕಾಲ ೪ ಗಂಟೆಗೆ ಕೋಟೆಯ ಶೃಂಗರಿಸಲ್ಪಟ್ಟ ಮುಂದುಗಡೆಯ ಅಂಗಳದಲ್ಲಿ ಸಾರ್ವಜನಿಕ ಚಹಪಾನ ಕೂಟವೊಂದು ನಡೆಯಿತು. ಶ್ರೀ. ಮೆನನ್ ಮತ್ತವರ ಪತ್ನಿಯವರಲ್ಲದೆ ಮೇಜರ್ ಜನರಲ್ ಕೆ. ಎಸ್. ತಿಮ್ಮಯ್ಯನವರು ಮತ್ತವರ ಪತ್ನಿಯವರೂ, ಕೊಡಗಿನ ಹಲವು ಉದ್ಯೋಗಸ್ಥ ಮತ್ತು ಉದ್ಯೋಗಸ್ಥರಲ್ಲದ ಪ್ರಮುಖರೂ ಸೇರಿ ಸುಮಾರು ೩೦೦ ಜನರು ಹಾಜರಿದ್ದರು.

ಸತ್ಕಾರ ಕೂಟದ ಪ್ರಾರಂಭದಲ್ಲಿ ಚೀಫ್ ಕಮಿಷನರಾದ ಮುದಲಿಯಾರವರು ಶ್ರೀ. ಮೆನನ್ ದಂಪತಿಗಳಿಗೆ ಸ್ವಾಗತ ಬಯಸಿ ಸ್ವಾತಂತ್ರ್ಯವು ದೊರೆತ ಮೇಲೆ ಕೊಡಗಿನಲ್ಲಿ ಸರಕಾರವು ಮಾಡಿರುವ ಕೆಲಸ ಕಾರ್ಯಗಳನ್ನು ಸೂಕ್ಷ್ಮವಾಗಿ ವಿವರಿಸಿ ಚಿಕ್ಕದೊಂದು ಭಾಷಣ ಮಾಡಿದರು. ಶ್ರೀ. ಮೆನನ್‌ರವರು ಇದಕ್ಕೆ ಉತ್ತರವೀಯುತ್ತಾ 'ಇಲ್ಲಿ ಭಾಷಣ ಮಾಡುವದು ಅನಿರೀಕ್ಷಿತವಾಗಿದೆ. ಕೊಡಗನ್ನು ನೋಡಬೇಕೆಂಬ ಕುತೂಹಲವು ಹಲವು ವರ್ಷಗಳಿಂದ ನನಗಿದ್ದರೂ ಅದು ಈಗ ಈಡೇರಿದುದಕ್ಕೆ ನಾನು ಸಂತೋಷಪಡುತ್ತೇನೆ. ಮೈಸೂರಿನಿಂದ ಕಾರಿನಲ್ಲಿ ಬರುತ್ತಿರುವಾಗಲೇ ಕೊಡಗಿನ ಗಡಿಯು ಸಮೀಪಿಸುತ್ತಾ ಒಂದು ಶಾಂತಿಮಯ ಶೀತಪ್ರದೇಶಕ್ಕೆ ಬರುತ್ತಿರುವ ಭಾವನೆ ಮತ್ತು ಅನುಭವ ನನಗಾಯಿತು. ಹಾಗೆಯೇ ಮಡಿಕೇರಿಗೆ ತಲಪಿದ ನಂತರ ನನ್ನ ಮನೋಭಾವ ನಿಜವಾಯಿತು. ಪ್ರಕೃತಿಯ ವೈಭವದಿಂದ ತುಂಬಿ ತುಳುಕುತ್ತಿರುವ ನಿಮ್ಮ ಈ ದೇಶವು ಸ್ವರ್ಗಸದೃಶವಾಗಿದೆ. ನೀವೆಲ್ಲರೂ ಕೊಡಗಿನ ಭವಿಷ್ಯದ ವಿಚಾರ ತಿಳಿಯಲು ಬಹು ಕುತೂಹಲದಿಂದಿರುವಿರೆಂಬುದು ನನಗೆ ಗೊತ್ತಿದೆ. ಡೆಸ್ಟಿಯಲ್ಲಿ ನವಂಬರ್ ತಿಂಗಳಲ್ಲಿ ನಿಮ್ಮ ಪ್ರತಿನಿಧಿಗಳೊಡನೆ ನಡೆದ ಸಮ್ಮೇಳನದ ನಂತರ ಇಂಡಿಯೂ ಸರಕಾರವು ಕೊಟ್ಟ ತೀರ್ಮಾನವು ನಿಮಗೆ ತಿಳಿದೇ ಇದೆ. ಕೆಲವು ಸಮಯದ ವರೆಗೆ ನಿಮ್ಮ ಈಗಿನ ಆಡಳಿತ ಕ್ರಮವು ಮುಂದರಿಯುವದೆಂಬುದೇ ಆ ತೀರ್ಮಾನವಾಗಿದೆ. ಕೇಂದ್ರ ಸರಕಾರಕ್ಕೆ ಕೂಡಲೇ ಕೈಕೊಳ್ಳಬೇಕಾದ ತುರ್ತಿನ ಮತ್ತು ಮಹತ್ವದ ಪ್ರಶ್ನೆಗಳಿವೆ. ಆಂಧ್ರ ಪ್ರಾಂತ ನಿರ್ಮಾಣವನ್ನು ತೀರ್ಮಾನಿಸಿದ್ದರೂ ಕೆಲವು ವರ್ಷಗಳ ವರೆಗೆ ಭಾಷಾವಾರು ಪ್ರಾಂತರಚನೆಯ ಬಗ್ಗೆ ಇಂಡಿಯೂ ಸರಕಾರದವರು ಕೈಹಚ್ಚಲಾರರೆಂಬುದು ಖಂಡಿತ. ಆದರಲ್ಲೂ ಮೈಸೂರು, ಹೈದರಾಬಾದ್, ಮುಂಬಾಯಿ ಮತ್ತು ಮದ್ರಾಸ್ ಕರ್ನಾಟಕ ಭಾಗಗಳನ್ನೊಳಗೊಂಡ ಕರ್ನಾಟಕ ಪ್ರಾಂತ್ಯದ ನಿರ್ಮಾಣದ ಸಾಧ್ಯತೆಯು ದೂರವೇ ಇರುವದೆಂಬುದರಲ್ಲಿ ಸಂಶಯವಿಲ್ಲ. ಹೀಗೆ ಹೊಸ ಪ್ರಾಂತ ರಚನೆಗೆ ಕೈಹಚ್ಚಿದರೆ ಇದನ್ನು ಎಲ್ಲೆ ನಿಲ್ಲಿಸಬೇಕಾಗುವದೆಂಬುದು ಕಷ್ಟದ ವಿಷಯವಾಗುವದು. ಆದುದರಿಂದ ಈಗಾಗಲೇ ವಿಲೀನಗೊಳಿಸಿರುವ ಸಂಸ್ಥಾನಗಳ ಆರ್ಥಿಕ ಹಾಗೂ ಆಡಳಿತ ವ್ಯವಸ್ಥೆಯನ್ನು ಸರಿಪಡಿಸಿ ಒಂದು ಸ್ಥಿಮಿತರೂಪಕ್ಕೆ ತರುವದೇ ಇಂಡಿಯೂ ಸರಕಾರದ ತತ್ಕಾಲದ ಗುರಿಯಾಗಿದೆ. ಕೂಡಲೇ ಭಾಷಾವಾರು ಪ್ರಾಂತಗಳನ್ನು ಮಾಡುವದರಿಂದ ಕೇಂದ್ರ ಸರಕಾರದ ಭದ್ರತೆಗೂ ಅಪಾಯ ತಟ್ಟಬಹುದೆಂಬ ಸಂಶಯವು ಕೂಡಾ ಇದೆ.

ಕೆಲವು ವರ್ಷಗಳ ವರೆಗೆ ಭಾಷಾನುವಾರು ಪ್ರಾಂತಗಳ ರಚನೆಯ ಬಗ್ಗೆ ಇಂಡಿಯೂ ಸರಕಾರವು ಕೈಹಾಕುವಂತಿಲ್ಲ. ಹೀಗೆ ಹೊಸ ಪ್ರಾಂತಗಳನ್ನು ರಚಿಸುವದರಿಂದ ಹಿಂಬೀ ಒಕ್ಕೂಟಿನ ಭದ್ರತೆಗೆ ಧಕ್ಕೆ ತಗಲಬಹುದು. ವಿಲೀನೀಕರಣವಾದ ಸಂಸ್ಥಾನಗಳ ಯೂನಿಯನ್ ಪ್ರಾಂತಗಳ ಆಡಳಿತ ಹಾಗೂ ಆರ್ಥಿಕ ವ್ಯವಸ್ಥೆಯನ್ನು ಸರಿಗೊಳಿಸುವದೇ ಇಂಡಿಯೂ ಸರಕಾರದ ತತ್ಕಾಲಿಕ ಗುರಿಯಾಗಿದೆ. ಆದುದರಿಂದ ಹೊಸ ಪ್ರಾಂತಗಳನ್ನು ಮಾಡುವದಾಗಲೀ, ಬೇರೆ ಪ್ರಾಂತಗಳ ವಿಲೀನೀಕರಣವಾಗಲೀ ಸದ್ಯ ಕೇಂದ್ರ ಸರಕಾರದಿಂದ ಆಗದು. ಈ ದೆಸೆಯಿಂದ ಕೊಡಗಿನ ಸಂಯೋಜನೆಯ ಮೂತು ಮುಂದಿನ ವರ್ಷಗಳ ವರೆಗೆ ಬರುವಂತಿಲ್ಲ ಎಂಬುದೇ ಶ್ರೀ. ಮೆನನರ ಮಡಿಕೇರಿ ಭಾಷಣದ ಸಾರಾಂಶವಾಗಿದೆ.

ಸಾಯಂಕಾಲ ಆಂವರೆ ಗಂಟೆಯಿಂದ ಏಳುವರೆ ಗಂಟೆಯವರೆಗೆ ಬಲಮುರಿ ಗ್ರಾಮಸ್ಥರ ಹಲವು ವಿಧದ 'ಬೊಳಕಾಟ'ವು ನಡೆಯಿತು. ಜನರು ನೋಡಲಿಕ್ಕೆಕಿಕ್ಕಿರಿದು ನೆರೆದಿದ್ದರು. ಅಂತ್ಯದಲ್ಲಿ ಶ್ರೀ ಮೆನನ್‌ರವರು ಎಂಲೆಯಾಳ ಭಾಷೆಯಲ್ಲಿ ಮಾತಾಡುತ್ತಾ "ಕಾಳಕ್ಕೂ ಮೇಳಕ್ಕೂ ಸರಿಯಾದ ಶಾಸ್ತ್ರೀಯವೂ ಉತ್ಕೃಷ್ಟವೂ ಆದ ನಿಮ್ಮ ಈ ಕಲೆತವನ್ನು ಅನಿರೀಕ್ಷಿತವಾಗಿ ನೋಡುವ ಪುಣ್ಯವು ಲಭಿಸಿದಕ್ಕೆ ನಾನು ಬಹಳ ಸಂತೋಷಪಡುತ್ತೇನೆ. ಯಾವ ದೇವತೆಗಳ ಸ್ತೋತ್ರಕ್ಕಾಗಿ ಈ ಕಲೆತವನ್ನು ಅಭಿನಯಿಸಿದರೋ ಆ ದೇವತೆಗಳು ನಿಮಗೆ ಆಶೀರ್ವದಿಸಲಿ" ಎಂದು ತಮ್ಮ ಮೆಚ್ಚುಗೆಯನ್ನು ಸೂಚಿಸಿದರು.

ಮರುದಿನ ಬೆಳಿಗ್ಗೆ ಸುಮಾರು ೧೧ ಗಂಟೆಗೆ ಶ್ರೀ ಮೆನನ್ ಪಾರ್ಟಿಯವರು ಚೀಫ್ ಕಮಿಷನರು ಮೊದಲಾದ ಉದ್ಯೋಗಸ್ಥರೊಡಗೂಡಿ ಮಡಿಕೇರಿಯಿಂದ ಹೊರಟು ಮೂರ್ನಾಡು ವೀರಾಜಪೇಟೆ ಗೋಣಿಕೊಪ್ಪಲು ದಾರಿಗಾಗಿ ಮೈಸೂರಿಗೆ ಹೋದರು. ಧಾರಿಯಲ್ಲಿ ಕಲವು ಗ್ರಾಮದ ಮನೆಗಳನ್ನು ನೋಡಿದರು. ಅಲ್ಲದೆ ಮೂರ್ನಾಡಿನಲ್ಲೂ, ವೀರಾಜಪೇಟೆಯಲ್ಲೂ ಜನರು ಸೇರಿ ಅವರಿಗೆ ಹೂವಿನ ಹಾರಗಳನ್ನು ಹಾಕಿ ಹಣ್ಣು ಹಂಪಲುಗಳನ್ನು ಕೊಟ್ಟು ಸತ್ಕರಿಸಿದಲ್ಲದೆ ಚಿಕ್ಕ ಬಿನ್ನಹ ಪತ್ರಗಳನ್ನು ಅರ್ಪಿಸಿದರು. ಮೂರ್ನಾಡಿನಲ್ಲಿ ಶ್ರೀ ಕೆ. ಯಂ ಮೊಣ್ಣಪ್ಪನವರೂ ವೀರಾಜಪೇಟೆಯಲ್ಲಿ ಶ್ರೀ. ಯನ್. ಸಿ. ಚಿಣ್ಣಪ್ಪನವರೂ ಬಿನ್ನಹ ಪತ್ರಗಳನ್ನೊಪ್ಪಿಸಿದರು. ಕೊಡಗನ್ನು ಇಲ್ಲಿಯ ಹೆಚ್ಚಿನ ಜನರ ಅಭಿಪ್ರಾಯದಂತೆ ಪ್ರತ್ಯೇಕ ಪಡಿಸಲು ಸಹಾಯಮಾಡಿದಕ್ಕಾಗಿ ಶ್ರೀ ಮೆನನ್‌ರವರನ್ನು ವಂದಿಸಿದ್ದಲ್ಲದೆ ಕೂಡಲೇ ಕೊಡಗಿನ ನ್ಯಾಯ ವಿಧಾಯಕ ಸಭೆಗೆ ಹೊಸ ಚುನಾವಣೆ ನಡೆಸುವಂತೆಯೂ ಇಂಡಿಯೂ ಪಾರ್ಲಿಮೆಂಟು ಸಭೆಗೆ ಇಲ್ಲಿಯ ಪ್ರತಿನಿಧಿಯನ್ನು ಹೊಸದಾಗಿ ಜನರೇ ಸೀದಾ ಆರಿಸುವಂತೆಯೂ ಮತ್ತು ಕೌನ್ಸಿಲಿನ ಹೊಸ ಚುನಾವಣೆಯಾಗುವವರೆಗೆ ಈಂದಾಯ ಕಾಣಿಕೆ ಹೆಚ್ಚಿಸುವಿಕೆಯ ಮುಸೂದೆಗಳನ್ನು ತಾರದಾಗಿಯೂ ಮಾಡುವಂತೆ ಸಹಾಯ ಮಾಡಬೇಕಾಗಿ ಅವರನ್ನು ಕೇಳಿಕೊಳ್ಳಲಾಯಿತು. ಶ್ರೀ ಮೆನನ್‌ರವರು ವಿರಾಜಪೇಟೆಯಲ್ಲಿ ಉತ್ತರವೀಯುತ್ತಾ ಸ್ವಾಗತಕ್ಕೆ ಜನರನ್ನು ವಂದಿಸಿ, ಹೊಸ ಘಟನೆಯು ಬಂದಮೇಲೆ ಜನರ ಅಭಿಪ್ರಾಯಕ್ಕೆ ವಿರುದ್ಧವಾಗಿ ನಮ್ಮದೇ ಶವನ್ನು ಎಂದಿಗೂ ಸಂಯೋಜನೆ ಮಾಡಲಾಗುವದಿಲ್ಲ. ಎಲ್ಲವೂ ಜನರ ಅಭಿಪ್ರಾಯದಂತೇ ನಡೆಸಲಾಗುವದೆಂದು ಹೇಳಿ ನ್ಯಾಯವಾದ ಈ ನಿಮ್ಮ ಕೋರಿಕೆಗಳನ್ನು ಗೃಹ ಮಂತ್ರಿಯವರಾದ ಸರದಾರ್ ಪಟೇಲರವರ ಮುಂದಿಡುವನೆಂದು ಭರವಸೆಯನ್ನಿತ್ತರು.

ಕೊಡಗು

ತಾ. ೧೩-೧-೧೯೩೦ನೇ ಶುಕ್ರವಾರ

ಕೊಡಗಿನ ಭವಿಷ್ಯ.

ಕೊಡಗಿನ ಭವಿಷ್ಯತ್ತಿನ ವಿಚಾರ ದೇಶದಲ್ಲಿ ಹಲವು ವರ್ಷಗಳಿಂದಲೇ ಚಳವಳಿ ನಡೆಯುತಿತ್ತು. ಈ ವಿಚಾರದಲ್ಲಿ ಜನರಲ್ಲಿ ಭಿನ್ನ ಭಿನ್ನ ಅಭಿಪ್ರಾಯಗಳಿದ್ದರೂ ಮುಖ್ಯವಾಗಿ ಕೊಡಗನ್ನು ಮುಂದಕ್ಕೂ ಹೀಗೆಯೇ ಪ್ರತ್ಯೇಕ ಪ್ರಾಂತವಾಗಿಟ್ಟು ಕೊಂಡು ಜವಾಬ್ದಾರಿ ಸರಕಾರ ನಡೆಯಬೇಕೆನ್ನುವ ಪಕ್ಷವೊಂದು, ಕೊಡಗನ್ನು ದೊಡ್ಡ ಪ್ರಾಂತಕ್ಕೆ ಅಂದರೆ ಇತ್ತೀಚೆಗೆ ಮೈಸೂರೊಂದಿಗೆ ಸೇರಿಸಿದರೇನೇ ದೇಶದ ಕಲ್ಯಾಣವಾಗುವದೆನ್ನುವ ಇನ್ನೊಂದು ಪಕ್ಷ ಹೀಗೆ ಎರಡು ಪಕ್ಷಗಳು ಒಡೆದು ಕಾಣುತ್ತಿದ್ದವು. ಈ ಎರಡು ಪಕ್ಷಗಳು ದೇಶದಲ್ಲಿ ಹಲವು ಸಭೆಗಳನ್ನು ನಡೆಸಿ ಅಲ್ಲಿಯ ತೀರ್ಮಾನಗಳನ್ನೂ, ವಿಜ್ಞಾಪನಾ ಪತ್ರಗಳನ್ನೂ ಇಂಡಿಯಾ ಸರಕಾರಕ್ಕೆ ಕಳುಹಿಸುತ್ತಾ ಬಂದಿದ್ದಾಯಿತು. ಈ ವಿಚಾರವನ್ನು ಬಗೆಹರಿಸುವ ದೃಷ್ಟಿಯಿಂದ ಇಂಡಿಯಾ ಸರಕಾರದ ಗೃಹ ಮಂತ್ರಿಯವರು ಕೊಡಗಿನ ಹತ್ತು ಪ್ರತಿನಿಧಿಗಳನ್ನು ಕರೆಸಿಕೊಂಡು ಕಳೆದ ನವಂಬರ್ ತಿಂಗಳು ೧೭ರಲ್ಲಿ ಡೆಲ್ಲಿಯಲ್ಲಿ ಒಂದು ಚಿಕ್ಕ ಸಮ್ಮೇಳನವನ್ನು ನಡೆಸಿದರು. ಈ ಸಮ್ಮೇಳನದ ಚರ್ಚೆಯ ವಿವರವನ್ನೂ, ಈ ವೇಳೆದಲು ದೇಶೀಯರು ಮಾಡಿದ್ದ ಕೋರಿಕೆಗಳನ್ನೂ ಕೂಲಂಕುಶವಾಗಿ ಪರ್ಯಾಲೋಚಿಸಿ ಕೊಡಗಿನ ಆಡಳಿತವನ್ನು ಕೆಲವು ಸಮಯದ ವರೆಗೆ ಹೀಗೆಯೇ ಪ್ರತ್ಯೇಕವಾಗಿಟ್ಟು ಮುಂದಕ್ಕೆ ಏರ್ಪಾಟಾಗುವದೆಂದು ಇಂಡಿಯಾ ಸರಕಾರದವರು ತೀರ್ಮಾನವನ್ನು ಕೊಟ್ಟರು. ಆದರೆ ಈ ತೀರ್ಮಾನದಿಂದ ಕೊಡಗಿನ ಭವಿಷ್ಯತ್ತು ಸ್ಪಷ್ಟವಾಗಿಲ್ಲ. ಕೆಲವು ದಿವಸಗಳಲ್ಲೇ ಇದನ್ನು ಮೈಸೂರೊಂದಿಗೆ ಸಂಯೋಜನೆ ಮಾಡಿ ಬಿಡುವ ಸಂಚರ್ಭ ಕಾಣಿಸಿ ಇದೆಯೆಂದು ಕೆಲವರು ಅನ್ನತೊಡಗಿದರು.

ಇವರಲ್ಲಿಯ ಈ ಸಂಶಯಗಳನ್ನು ಪರಿಹರಿಸಲೋಸುಗವೋ ಎಂಬಂತೆ ಸರ್ದಾರ್ ಪಟೇಲ್‌ರವರು ಕೇಂದ್ರ ಶಾಸನ ಸಭೆಯಲ್ಲಿ ಸೆಂಟ್ರಲ್ ಪೋಲೀಸ್ ಮಸೂದೆಯನ್ನು ಚರ್ಚೆಗೆ ತಂದಾಗ್ಯೆ "ಕೇಂದ್ರ ಸರಕಾರವು ಸಂಸ್ಥಾನವಲ್ಲದ ಯಾವದೇ ಕೇಂದ್ರಾಡಳಿತ ಭಾಗವನ್ನು ನೆರೆಯ ಪ್ರಾಂತಯಾ ಸಂಸ್ಥಾನದೊಡನೆ ಸಂಯೋಜನೆ ಮಾಡುವ ಸೂಚನೆಯನ್ನು ಆಲೋಚಿಸಲಾರದು" ಎಂದು ತಾ. ೩೪-೧೨-೪೯ರಲ್ಲಿ ಸ್ಪಷ್ಟವಾಗಿ ಹೇಳಿದರು. ಇಂಥಾ ಸ್ಪಷ್ಟ ಹೇಳಿಕೆಯನ್ನು ಪತ್ರಿಕೆಗಳಲ್ಲಿ ಓದಿದರೂ ಕೆಲವರಲ್ಲಿ ಸಂಶಯ ಪಿಶಾಚಿಯು ನಮ್ಮಲ್ಲಿ ಕೆಲವರನ್ನು ಬಿಟ್ಟಿರಲಿಲ್ಲ. ಇದಾಗಿ ಎರಡು ವಾರಗಳಾಗುವದರೊಳಗೇನೆ ಸಂಸ್ಥಾನಗಳ ಇಲಾಖೆಯ ಕಾರ್ಯದರ್ಶಿಗಳಾಗಿರುವ ಶ್ರೀ ವಿ. ಪಿ. ಮೆನನ್‌ರವರು ತಾ. ೧೮ರಲ್ಲಿ ಮಡಿಕೇರಿಯಲ್ಲಿ ಕೊಟ್ಟ ಸತ್ಕಾರ ಕೂಟದಲ್ಲಿ ಭಾಷಣ ಮಾಡುತ್ತಾ ಕೊಡಗಿನ ಸಂಯೋಜನೆಯು ಮಾತು ಈಗಕ್ಕೆ ಇಲ್ಲದಾಗಿರುವದರಿಂದ ಇನ್ನಾದರೂ ಇಲ್ಲಿಯವರು ಒಗ್ಗಟ್ಟಾಗಿ ಕೊಡಗಿನ ಆಡಳಿತ ರೀತಿಯನ್ನು ದೇಶದ ಹಿತದೃಷ್ಟಿಯಿಂದ ಹೇಗೆ ನಡೆಸಬೇಕೆಂಬುದಕ್ಕೆ ರಚನಾತ್ಮಕ ಸೂಚನೆಗಳನ್ನು ಮಾಡುವದು ಯೋಗ್ಯವೂ ಅವಶ್ಯವೂ ಇದೆಯೆಂದು ವಿಷದವಾಗಿ ಅಭಿಪ್ರಾಯ ಮಾಡಿದರು. ಆದುದರಿಂದ ಕೆಲವರ ಮನಸ್ಸಿನಲ್ಲಿ ಉಳಿದಿದ್ದ ಅಲ್ಪ ಸ್ವಲ್ಪ ಸಂಶಯಗಳು ಇನ್ನಾದರೂ ನಿವಾರಣೆಯಾಗಬೇಕು.

ಈ ತಾರೀಕು ೨೬ಕ್ಕೆ ಜಾರಿಯಲ್ಲಿ ಬರುವ ಭಾರತದ ಹೊಸ ಘಟನೆಯು ನಂತರ ಜನರ ಅಭಿಪ್ರಾಯವನ್ನು ಉಲ್ಲಂಘಿಸುವ ಸಾಹಸತೆಯು ಯಾವ ಸರಕಾರಕ್ಕೂ ಇಲ್ಲದ್ದರಿಂದಲೂ, ಸಂಯೋಜನಾ ಪ್ರಶ್ನೆಯು ಈಗ ಇಲ್ಲದ್ದರಿಂದಲೂ ಮುಖ್ಯತಃ ಕೊಡಗಿನ ಕಾಂಗ್ರೆಸ್ ಕೆಲಸಗಾರರೂ ಸಾಮಾನ್ಯವಾಗಿ ದೇಶೀಯರೆಲ್ಲರೂ ಕೊಡಗಿನ ಭವಿಷ್ಯದ ವಿಚಾರವಾಗಿ ಈ ವೇಳೆದಲು ತಮ್ಮೊಳಗಿದ್ದ ಭಿನ್ನಾಭಿಪ್ರಾಯ ಮತ್ತು ವೈಷಮ್ಯಗಳನ್ನು ಮರೆತು ಒಗ್ಗಟ್ಟಾಗಿ ದೇಶದ ಹಿತದೃಷ್ಟಿಯಿಂದ ಇಲ್ಲಿಯ ಸರಕಾರವನ್ನು ಯಾವ ರೀತಿ ರೂಪಿತಗೊಳಿಸಬೇಕು ಎಂಬ ಕಾರ್ಯಕ್ಕೆ- ಶ್ರೀ ಮೆನನ್‌ರವರು ಅಪೇಕ್ಷಿಸಿದಂತೆ ಕೈಹಚ್ಚುವದೇ ಪ್ರಧಾನ ಕರ್ತವ್ಯವಾಗಿದೆ. ನಾವು ಪ್ರಾರಂಭದಿಂದಲೇ ಹೇಳುತ್ತಾ ಬಂದಂತೆ ದೇಶದ ಭವಿಷ್ಯತ್ತು ದೇಶೀಯರ ಕೈಯಲ್ಲಿಯೇ ಇದೆಯೆಂಬುದು ಸ್ಪಷ್ಟವಾಗಿದೆ.

ಇವನ್ನೇ ಅಧಿಕಾರಯುಕ್ತ ವಾಣಿಗಳೂ ಸಾರಿ ಹೇಳುತ್ತಿವೆ. ಜನರ ಅಭಿವೃದ್ಧಿ ದೃಷ್ಟಿಯಿಂದ ಯಾವ ರೀತಿಯ ಸರಕಾರ ಪದ್ಧತಿಯು ಬೇಕೆಂಬುದನ್ನು ನಿರ್ಧರಿಸಿಕೊಳ್ಳುವಂಥಾ ಹಕ್ಕು ಜನರಿಗೆ ದೊರೆತಿದೆ. ಜನರು ಒಗ್ಗಟ್ಟಾದರೆ ಇದು ಸುಲಭಸಾಧ್ಯವಾಗುವದು. ಇದರಿಂದ ದೇಶವು ದಿನೇ ದಿನೇ ಮುಂದರಿಯುವದರಲ್ಲಿ ಸಂದೇಹವಿಲ್ಲ. ಬದಲು ಸಾರ್ವಜನಿಕ ಕೆಲಸಗಾರರು ತಮ್ಮ ಚಿಕ್ಕ ಚಿಕ್ಕ ಭಿನ್ನಾಭಿಪ್ರಾಯಗಳನ್ನು ಬಿಡಲಾರದೆ ಒಗ್ಗಟ್ಟಿಗೆ ಅಡ್ಡಿ ಬಂದರೆ ದೇಶದ ಮುಂದಿನ ಸ್ಥಿತಿಯು ಸುಖಶಾಂತಿದಾಯಕವಾಗದು. ದೇಶಕ್ಕೆ ಅತ್ಯತ್ಸವವಾದ ಸೇವೆಯನ್ನು ಸಲ್ಲಿಸಲು ಒದಗಿರುವ ಈ ಸುಸಂಧರ್ಭವನ್ನು ದೇಶದ ಮುಂದಾಳುಗಳು ಹಾಗೂ ಜನರು ಕಳಕೊಳ್ಳಲಿಕ್ಕಿಲ್ಲವೆಂದು ಆಶಿಸುತ್ತೇವೆ.

ವರ್ತಮಾನ.

ಕಳೆದ ತಿಂಗಳಲ್ಲಿ ಅಧ್ಯಾಪಕ ವೃತ್ತಿಯಿಂದ ನಿವೃತ್ತರಾದ ಶ್ರೀ ನಾಯಿಡ ಚಿಂಣಪ್ಪನವರಿಗೆ ೯-೧-೩೦ರಲ್ಲು ವೀರಾಜಪೇಟೆ ಪ್ರೌಢ ಶಾಲೆಯ ವಿದ್ಯಾರ್ಥಿಯರೂ ಅಧ್ಯಾಪಕರೂ ಸೇರಿ ಬೀಳ್ಕೊಡುವ ಕಾರ್ಯದರ್ಶಿಗಳಾಗಿರುವ ಸುತ್ತು, ನವಂಬರು ೧೭ರಲ್ಲಿ ಡೆಲ್ಲಿಯಲ್ಲಿ ನಡೆದ ಸಮ್ಮೇಳನದಲ್ಲಿ ಅಧ್ಯಕ್ಷರಾಗಿದ್ದ ಶ್ರೀ ವಿ. ಪಿ. ಮೆನನ್‌ರವರು ನಮ್ಮ ಮಧ್ಯಕ್ಕೇನೇ ಬಂದರು. ಇವರು ತಾರೀಕು ೧೭ರಲ್ಲಿ ಮಡಿಕೇರಿಯಲ್ಲಿ ಕೊಟ್ಟ ಸತ್ಕಾರ ಕೂಟದಲ್ಲಿ ಭಾಷಣ ಮಾಡುತ್ತಾ ಕೊಡಗಿನ ಸಂಯೋಜನೆಯು ಮಾತು ಈಗಕ್ಕೆ ಇಲ್ಲದಾಗಿರುವದರಿಂದ ಇನ್ನಾದರೂ ಇಲ್ಲಿಯವರು ಒಗ್ಗಟ್ಟಾಗಿ ಕೊಡಗಿನ ಆಡಳಿತ ರೀತಿಯನ್ನು ದೇಶದ ಹಿತದೃಷ್ಟಿಯಿಂದ ಹೇಗೆ ನಡೆಸಬೇಕೆಂಬುದಕ್ಕೆ ರಚನಾತ್ಮಕ ಸೂಚನೆಗಳನ್ನು ಮಾಡುವದು ಯೋಗ್ಯವೂ ಅವಶ್ಯವೂ ಇದೆಯೆಂದು ವಿಷದವಾಗಿ ಅಭಿಪ್ರಾಯ ಮಾಡಿದರು. ಆದುದರಿಂದ ಕೆಲವರ ಮನಸ್ಸಿನಲ್ಲಿ ಉಳಿದಿದ್ದ ಅಲ್ಪ ಸ್ವಲ್ಪ ಸಂಶಯಗಳು ಇನ್ನಾದರೂ ನಿವಾರಣೆಯಾಗಬೇಕು.

ಈ ತಾರೀಕು ೨೬ಕ್ಕೆ ಜಾರಿಯಲ್ಲಿ ಬರುವ ಭಾರತದ ಹೊಸ ಘಟನೆಯು ನಂತರ ಜನರ ಅಭಿಪ್ರಾಯವನ್ನು ಉಲ್ಲಂಘಿಸುವ ಸಾಹಸತೆಯು ಯಾವ ಸರಕಾರಕ್ಕೂ ಇಲ್ಲದ್ದರಿಂದಲೂ, ಸಂಯೋಜನಾ ಪ್ರಶ್ನೆಯು ಈಗ ಇಲ್ಲದ್ದರಿಂದಲೂ ಮುಖ್ಯತಃ ಕೊಡಗಿನ ಕಾಂಗ್ರೆಸ್ ಕೆಲಸಗಾರರೂ ಸಾಮಾನ್ಯವಾಗಿ ದೇಶೀಯರೆಲ್ಲರೂ ಕೊಡಗಿನ ಭವಿಷ್ಯದ ವಿಚಾರವಾಗಿ ಈ ವೇಳೆದಲು ತಮ್ಮೊಳಗಿದ್ದ ಭಿನ್ನಾಭಿಪ್ರಾಯ ಮತ್ತು ವೈಷಮ್ಯಗಳನ್ನು ಮರೆತು ಒಗ್ಗಟ್ಟಾಗಿ ದೇಶದ ಹಿತದೃಷ್ಟಿಯಿಂದ ಇಲ್ಲಿಯ ಸರಕಾರವನ್ನು ಯಾವ ರೀತಿ ರೂಪಿತಗೊಳಿಸಬೇಕು ಎಂಬ ಕಾರ್ಯಕ್ಕೆ- ಶ್ರೀ ಮೆನನ್‌ರವರು ಅಪೇಕ್ಷಿಸಿದಂತೆ ಕೈಹಚ್ಚುವದೇ ಪ್ರಧಾನ ಕರ್ತವ್ಯವಾಗಿದೆ. ನಾವು ಪ್ರಾರಂಭದಿಂದಲೇ ಹೇಳುತ್ತಾ ಬಂದಂತೆ ದೇಶದ ಭವಿಷ್ಯತ್ತು ದೇಶೀಯರ ಕೈಯಲ್ಲಿಯೇ ಇದೆಯೆಂಬುದು ಸ್ಪಷ್ಟವಾಗಿದೆ.

ಇವನ್ನೇ ಅಧಿಕಾರಯುಕ್ತ ವಾಣಿಗಳೂ ಸಾರಿ ಹೇಳುತ್ತಿವೆ. ಜನರ ಅಭಿವೃದ್ಧಿ ದೃಷ್ಟಿಯಿಂದ ಯಾವ ರೀತಿಯ ಸರಕಾರ ಪದ್ಧತಿಯು ಬೇಕೆಂಬುದನ್ನು ನಿರ್ಧರಿಸಿಕೊಳ್ಳುವಂಥಾ ಹಕ್ಕು ಜನರಿಗೆ ದೊರೆತಿದೆ. ಜನರು ಒಗ್ಗಟ್ಟಾದರೆ ಇದು ಸುಲಭಸಾಧ್ಯವಾಗುವದು. ಇದರಿಂದ ದೇಶವು ದಿನೇ ದಿನೇ ಮುಂದರಿಯುವದರಲ್ಲಿ ಸಂದೇಹವಿಲ್ಲ. ಬದಲು ಸಾರ್ವಜನಿಕ ಕೆಲಸಗಾರರು ತಮ್ಮ ಚಿಕ್ಕ ಚಿಕ್ಕ ಭಿನ್ನಾಭಿಪ್ರಾಯಗಳನ್ನು ಬಿಡಲಾರದೆ ಒಗ್ಗಟ್ಟಿಗೆ ಅಡ್ಡಿ ಬಂದರೆ ದೇಶದ ಮುಂದಿನ ಸ್ಥಿತಿಯು ಸುಖಶಾಂತಿದಾಯಕವಾಗದು. ದೇಶಕ್ಕೆ ಅತ್ಯತ್ಸವವಾದ ಸೇವೆಯನ್ನು ಸಲ್ಲಿಸಲು ಒದಗಿರುವ ಈ ಸುಸಂಧರ್ಭವನ್ನು ದೇಶದ ಮುಂದಾಳುಗಳು ಹಾಗೂ ಜನರು ಕಳಕೊಳ್ಳಲಿಕ್ಕಿಲ್ಲವೆಂದು ಆಶಿಸುತ್ತೇವೆ.

ವರ್ತಮಾನ.

ಕಳೆದ ತಿಂಗಳಲ್ಲಿ ಅಧ್ಯಾಪಕ ವೃತ್ತಿಯಿಂದ ನಿವೃತ್ತರಾದ ಶ್ರೀ ನಾಯಿಡ ಚಿಂಣಪ್ಪನವರಿಗೆ ೯-೧-೩೦ರಲ್ಲು ವೀರಾಜಪೇಟೆ ಪ್ರೌಢ ಶಾಲೆಯ ವಿದ್ಯಾರ್ಥಿಯರೂ ಅಧ್ಯಾಪಕರೂ ಸೇರಿ ಬೀಳ್ಕೊಡುವ ಕಾರ್ಯದರ್ಶಿಗಳಾಗಿರುವ ಸುತ್ತು, ನವಂಬರು ೧೭ರಲ್ಲಿ ಡೆಲ್ಲಿಯಲ್ಲಿ ನಡೆದ ಸಮ್ಮೇಳನದಲ್ಲಿ ಅಧ್ಯಕ್ಷರಾಗಿದ್ದ ಶ್ರೀ ವಿ. ಪಿ. ಮೆನನ್‌ರವರು ತಾ. ೧೮ರಲ್ಲಿ ಮಡಿಕೇರಿಗೆ ಬಂದು ತಾ. ೧೯ರಲ್ಲಿ ಸುಮಾರು ೬೦ ಜನರಿಗೆ ಭೋಟಿ ಇತ್ತರು. ಸಾಯಂಕಾಲ ಸಾರ್ವಜನಿಕ ಚಹಪಾನ ಕೂಟವೊಂದನ್ನು ಅವರ ಗೌರವಾರ್ಥ ಏರ್ಪಡಿಸಲಾಗಿತ್ತು. ಮಾರನೆ ದಿವಸ ಅವರು ಮೇಜರ್ ಜನರಲ್ ತಿಮ್ಮಯ್ಯನವರೊಡನೆ ಜೋಗ್ ಜಲಪಾತಕ್ಕೆ ಹೋದರು.

ಎಸ್. ಎಸ್. ಎಲ್. ಸಿ. ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಶ್ರೇಗಳಾದ ಕೆ. ಸಿ. ಕರುಂಬಯ್ಯ, ಕೆ. ಬಿ. ಚಂಗಪ್ಪ, ಎಂ. ಟಿ. ತಂಗಮ್ಮ, ಎಂ. ಸಿ. ಐಯ್ಯಪ್ಪ, ಕೆ. ಬೋಪಯ್ಯ, ಇವರುಗಳು ತೇರ್ಗಡೆಯಾಗಿರುವರು.

ಉತ್ತರ ತರದ ಕಿರುಬೆಳಿಯು, ಕಣ್ಣು ಬತ್ತ ಮತ್ತು ಕೊಯಮುತ್ತೂರು ಕಣ್ಣು ಬತ್ತದ ಬೀಜದ ಬತ್ತಗಳು ಬೇಕಾದವರು ಜನವರಿ ತಿಂಗಳು ೩೧ರ ಒಳಗೆ ವ್ಯವಸಾಯ ಇಲಾಖಾ ಆಫೀಸರರಿಗೆ ಬರಕೊಳ್ಳಬೇಕಾಗಿ ಸದರಿ ಆಫೀಸರು ತಿಳಿಸುತ್ತಾರೆ.

ಕೊಡಗಿನ ಭವಿಷ್ಯತ್ತಿನ ವಿಚಾರ ಕಳೆದ ನವಂಬರು ತಾರೀಕು ೧೭ರಲ್ಲಿ ಡೆಲ್ಲಿಯಲ್ಲಿ ನಡೆದ ಸಮ್ಮೇಳನದ ನಡವಳಿಕೆಯನ್ನು ಪ್ರಕಟಿಸಬಹುದೋ ಎಂದು ಸಂಬಂಧಿಸಿದ ಅಧಿಕಾರಿಗಳನ್ನು ಬರೆದು ಕೇಳಿದುದಕ್ಕೆ ಅಂಥಾ ಸಮ್ಮೇಳನಗಳ ತೀರ್ಮಾನಗಳನ್ನು ಪ್ರಕಟಿಸುವದಲ್ಲದೆ ಪ್ರೋಸೀಡಿಂಗ್ಸನ್ನು ಸಾಮಾನ್ಯವಾಗಿ ಪ್ರಕಟಿಸಬಾರದೆಂದು ಜವಾಬು ಬಂದಿದೆಯೆಂದು ತಿಳಿದು ಬರುತ್ತದೆ.

ವಿನಂತಿ.

ಭೂಕಂದಾಯ ಸಮ್ಮರಿ ಸೆಟ್ಲ್‌ಮೆಂಟ್ ಯೂ ಇತರ ಯಾವ ತೆರಿಗೆಯನ್ನು ಏರಿಸುವದರ ಸಂಬಂಧ ಜನಾಭಿಪ್ರಾಯವನ್ನು ಸರಕಾರಕ್ಕೂ ಹಾಗೂ ಕೌನ್ಸಿಲ್ ನವಂಬರಾಳಿಗೂ ತಿಳಿಸುವ ಬಗ್ಗೆ ಈ ತಾರೀಕು ೧೩ನೇ ಸೋಮವಾರ ಹದಿನೇಳು ಮತ್ತು ೨೦ನೇ ಸೋಮವಾರ ಹದಿನಾಲ್ಕು ತಾರೀಕುಗಳಲ್ಲೂ ತಾ. ೧೫ನೇ ಬುಧವಾರ ವೀರಾಜಪೇಟೆಯಲ್ಲೂ, ತಾ. ೨೬ನೇ ಆದಿತ್ಯವಾರ ಗೋಣಿಕೊಪ್ಪಲಲ್ಲೂ ಸಾರ್ವಜನಿಕ ಸಭೆಗಳು ಮಧ್ಯಾಹ್ನ ನಡೆಯುವವು. ಸಾರ್ವಜನಿಕರೂ, ಕೌನ್ಸಿಲ್ ಸದಸ್ಯರೂ ಹಾಜರಾಗಬೇಕಾಗಿ ಕೋರಿಕೆ.

ಕೆ. ಕೆ. ಅಪ್ಪಯ್ಯ,
ಎಂ. ಎಸ್. ಸೋಮಯ್ಯ,
ಕೆ. ಎ. ಚಿಂಣಪ್ಪ.

೧೩-೧-೩೦

ವಾರ್ತೆ.

ಇಂಗ್ಲೆಂಡಿನ ಸಾರ್ವಜನಿಕ ಚುನಾವಣೆಯು ಫೆಬ್ರುವರಿ ತಾ. ೨೫ ರಲ್ಲಿ ನಡೆಯುವುದು.

ಕಾಮನ್‌ವೆಲ್ತ್ ಸಮ್ಮೇಳನವು ಕೊಲೊಂಬೋದಲ್ಲಿ ತಾ. ೯ ರಿಂದ ನಡೆಯುತ್ತಿದೆ. ಭಾರತದ ಪ್ರತಿನಿಧಿಯಾಗಿ ಪಂ. ನೆಹರೂರವರು ಹೋಗಿರುವರು.

ಕಲ್ಕತ್ತಾದಲ್ಲಿಯ ಕಮ್ಯೂನಿಷ್ಟ್ ಗಲಭೆಯನ್ನು ಹುದ್ದು ಪರೀಕ್ಷಿಸಲು ಸರ್ದಾರ್ ಪಟೇಲರು ತಾ. ೧೩ ರಲ್ಲಿ ಕಲ್ಕತ್ತಾಕ್ಕೆ ಹೋಗಿರುವರು.

ಹೈದರಾಬಾದ್ ಮತ್ತು ಸಿಕಂದರಾಬಾದ್ ಮುನ್ಸಿಪಾಲಿಟಿಗಳು ಮತ್ತು ಕೆಲವು ಸರಕಾರಿ ಉದ್ಯೋಗಿಗಳು ಒಟ್ಟು ೧೫,೫೦೦ ಜನರು ಮುಷ್ಕರ ಹೂಡಿದ್ದಾರೆ. ನಿಲಿಟರಿಯು ಇವರ ಕೆಲಸವನ್ನು ನೋಡುತ್ತಿದೆ.

ಸಂಯುಕ್ತ ಪ್ರಾಂತದಲ್ಲಿ ಜಮೀನ್ದಾರರ ಪದ್ಧತಿಯನ್ನು ನಿರ್ಮೂಲ ಮಾಡಲು ಪ್ರಾರಂಭಿಸಿರುವ ನಿಧಿಗೆ ೧೨ ಕೋಟಿ ರೂಪಾಯಿ ಸಂಗ್ರಹವಾಗಿದೆ.

ವಿಮಾನ ಪಹಿವಾಟನ್ನು ರಾಷ್ಟ್ರೀಕರಿಸುವ ಆಲೋಚನೆ ಕೇಂದ್ರ ಸರಕಾರಕ್ಕಿದೆಯೆಂದು ಬೊಂಬಾಯಿಯಲ್ಲಿ ಕಮ್ಯೂನಿಕೇಶನ್ ಮಂತ್ರಿ ಶ್ರೀ ರಾಫಿ ಅಹಮ್ಮದ್ ಕಿಡ್ವಾಯಿಯವರು ಹೇಳಿದರು.

ಸರಕಾರವ ಆಹಾರ ಧಾನ್ಯ ನಿಯಂತ್ರಣದ ವಿರುದ್ಧ ಲಾಭ ಬಡಕತನಕ್ಕೆ ಕೈಯಿಕ್ಕಿದನೆಂಬ ಕಾರಣ ಅಬ್ದುಲ್ಲ ಬಟ್ ಎಂಬವರಿಗೆ ಸಾರ್ವಜನಿಕವಾಗಿ ೧೫ ಚಡೀ ಏಟುಗಳು ಕೊಡಲ್ಪಟ್ಟವು.

ಪೊಲೀಸ್ ಅಧಿಕಾರಿಗೆ ಆರು ಲಕ್ಷ ರೂಪಾಯಿಗಳ ಲಂಚ ಕೊಡಲು ಹೋದ ರೆಂಬ ಶಕ್ಸೇರಿನ ಮೇಲೆ ಬೊಂಬಾಯಿಯ ಗೋಕುಲಚಂದ್ ದ್ವಾರಕದಾಸ್ ಮೊರಾರ್ಕಾ ಎಂಬ ಮಿಲಿಯೊಧಿಪತಿಗೆ ಒಂದು ವರ್ಷ ಕಾರಾಗೃಹ ಶಿಕ್ಷೆ ವಿಧಿಸಲ್ಪಟ್ಟಿದೆ.

ಡೆಲ್ಲಿ ಪ್ರಾಂತ್ಯದ ಆಡಳಿತ ರಚನೆಯ ಬಗ್ಗೆ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ನಿಯೋಗವೊಂದು ಪಂಡಿತ ನೆಹರೂರವರನ್ನು ಕಾಣಬೇಕೆಂದು ನಿರ್ಧರಿಸಿದೆ.

"ಕೊಡಗು" ಏಜಂಟರು,
ವೀರಾಜಪೇಟೆ.
ಶ್ರೀ. ಟಿ. ಎನ್." ಗೋವಿಂದ ರಾಜ್ಯ

ಓದುಗರ ಓಲೆಗಳು.

ಎಚ್ಚರಿಕೆ

ತಿರುವಾಂಕೂರಿನಲ್ಲಿ ಸರ್ ಸಿ. ಪಿ. ರಾಮಸ್ವಾಮಿಯವರಿದ್ದಾಗ ಹಿಂದಿ ಒಕ್ಕೂಟಕ್ಕೆ ತಿರುವಾಂಕೂರು ಸೇರಬೆ ಪ್ರತ್ಯೇಕ ಉಳಿಯಬೇಕೆಂದು ಮಾಡಿದ ಪ್ರಯತ್ನದಲ್ಲಿ ಅಲ್ಲಿಯ ಕಾಂಗ್ರೆಸ್ಸಿನ ವಿರುದ್ಧ ಕೈಕೊಂಡ ಕಾರ್ಯಾಚರಣೆಗೆ ಸಿ. ಪಿ. ಯವರು ಕಮ್ಯೂನಿಷ್ಟರ ಸಹಾಯ ಪಡೆದಿದ್ದರಂತೆ! ಕಡೆಗೆ ಸಿ. ಪಿ. ಯವರು ದೇಶ ಬಿಟ್ಟರು. ಆದರೆ ಕಮ್ಯೂನಿಷ್ಟರು ತಮ್ಮ ತತ್ವವಾದ ಲೂಟಿ, ದರೋಡೆ, ಕೊಲೆಯೊಂದಿಗೆ ಅಲ್ಲಿ ಉಳಿದರು.

ಹೈದರಾಬಾದಿನ ರಜಕಾರರು ಜನಾಭಿಪ್ರಾಯಕ್ಕೆ ವಿರುದ್ಧವಾಗಿ ಹೈದ್ರಾಬಾದು ಒಕ್ಕೂಟಕ್ಕೆ ಸೇರಬಾರದೆಂದು ಪ್ರಯತ್ನಿಸಿದಾಗ ರಜಕಾರರೂ, ಕಮ್ಯೂನಿಷ್ಟರೂ ಜೊತೆಯೂಗಿ ಪ್ರಯತ್ನಿಸಿದರು. ಕಡೆಗೆ ರಜಕಾರರು ನಿರ್ನಾಮವಾಗಿ ಕಮ್ಯೂನಿಷ್ಟರು ಅಲ್ಲಿ ಉಳಿದರು. ಇಂದೂ ತೆಲಂಗಣ ನೊದಲಾದೆಡೆ ಇಲ್ಲಸಲ್ಲದ ಲೂಟಿ, ದರೋಡೆ, ಕೊಲೆ ಅವರಿಂದ ನಡೆಯುತ್ತಿದೆ

ಓಬಿರಾಯನ ಕಾಲದಲ್ಲಿ ನೇಮಕಗೊಂಡ ಕೊಡಗಿನ ಕಾಂಗ್ರೆಸ್ ಎಡ್‌ಹಾಕ್–ಸಮಿತಿಯು ಜನತೆಯು ಅಭಿಪ್ರಾಯ ತೆಗೆಯದೆ ಕೊಡಗನ್ನು ವೈಸೂರು ಸಮೂನೇಶಗೊಳಿಸಲು ಯತ್ನಿಸಿದರು. ಆ ಪ್ರಯತ್ನ ಸಾಧ್ಯವಾಗದಿರಲು ಕೆಲವು ಕಮ್ಯೂನಿಷ್ಟರನ್ನು ಉಪಯೋಗಿಸಿಕೊಂಡು ಲೇಬರ್ ಯೂನಿಯನ್ ಮಾತಿತರ ಕೂಟಗಳನ್ನು ಮಾಡತೊಡಗಿದ್ದಾರಂತೆ. ಇದು ನಿಜವಾದರೆಮೇಲೆಹೇಳಿದ ಸಂಗತಿಗಳನ್ನು ಗಮನಿಸಿ ಬುದ್ಧಿಕಲಿಯುಬೇಕೆಂದು ಎಡ್‌ಹಾಕ್–ಕಾಂಗ್ರೆಸ್ ಸಮಿತಿಗೆ ಎಚ್ಚರಿಸುವುದಾಗಿದೆ. ಇಲ್ಲದಿದ್ದರೆ ಎಡ್‌ಹಾಕ್ ಸಮಿತಿಯು ನಿರ್ನಾಮಗೊಂಡು ಅವರಿಂದ ಪೋಷಿಸಲ್ಪಟ್ಟ ಕಮ್ಯೂನಿಷ್ಟರೀಅನಾಹುತ ನೂಡಲುಉಳಿಯುವರೆಂಬುದನ್ನು ತಿಳಿಯಬೇಕು. ಎಡ್‌ಹಾಕ್ ಸಮಿತಿಯು ಸಕಾಲದಲ್ಲಿ ಎಚ್ಚರಗೊಳ್ಳುವದೇ?

ಎಂ. ಬಾಲಕೃಷ್ಣ.

ಕಂದಾಯ

ಜನವರಿ ತಾರೀಕು ೫ ರಲ್ಲು ಕೊಡಗು ಗಜೆಟ್ಟಿನಲ್ಲಿ ಕೊಡಗಿನಲ್ಲಿ ಭೂಕಂದಾಯ ಏರಿಸುವ ಸೂಚನೆಯು ಪ್ರಕಟವಾಗಿದೆ. ಅದರಲ್ಲಿ ಪ್ಲಾಂಟೇಷನ್ ತ್ರಾಪ್ ಅಂದರೆ ಕಾಫಿ, ಚಿತ್ತಳೆ, ಮೊದಲಾದುವಕ್ಕೆ ಈಗಿರುವ ಕಂದಾಯದ ಮೂರು ಪಾಲೂ ಉಳಿದದಕ್ಕೆ ಅಂದರೆ ಭೂಮಿಗೆ ಎರಡು ಪಾಲೂ ಕಂದಾಯ ಹೆಚ್ಚು ಮಾಡುವ ಸೂಚನೆ ಇದೆ ಈ ಕಂದಾಯದ ದರದಿಂದ ಸುಮಾರು 4½ ಲಕ್ಷ ರೂಪಾಯಿ ಹೆಚ್ಚಿಗೆ ವರಮಾನ ಬರುವುದೆಂದೂ ಅಂದಾಜು ಮಾಡಲಾಗಿದೆ.

ಈ ವಿಚಾರದಲ್ಲಿ ಕಳೆದವಾರದ 'ಕೊಡಗು' ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಬಾಕ್ಸಿ ಯು ಸಮಂಜಸವೂ, ಯೋಗ್ಯವೂ ಆಗಿದೆ ಜನ್ಮ, ಜಹಗೀರು ಎಂಬ ಕಾರಣಮ್ಯಾವಿಡದೆ ಭೂಕಂದಾಯವನ್ನು ಸಾಗು ಭೂಮಿಯ ಕಂದಾಯ ದರಕ್ಕೆ ಏರಿಸಲಿ. ಆದರೆ ಸಾಗುಭೂಮಿಯ ಕಂದಾಯ ಮೂತ್ರ ಈಗಿರುವ ದರದಲ್ಲಿಯೇ ಇರಬೇಕು. ಹೆಚ್ಚು ಆದಾಯ ಬರುವ ಕಿತ್ತಳೆ, ಕಾಫಿ ಗಳಿಗೆ ಕಂದಾಯ ಮೂರಲ್ಲ ನಾಲ್ಕುಪಟ್ಟು ಏರಿದರೂ ಹೆಚ್ಚಿನ ತೊಂದರೆ ಆಗದು. ಆದ್ದರಿಂದ ಸರಕಾರವಾಗಲೀ ಜನ ಪ್ರತಿನಿಧಿಗಳಾಗಲೀ ಸಾಗು ಭೂಮಿಗೆ ಈಗಿರುವ ಕಂದಾಯವನ್ನು ಏರಿಸುವ ಯತ್ನ ಮಾಡಬಾರದು. ಬಡ ರೈತನ ಸ್ಥಿತಿ ಒಂದು ಕಾಸೂ ಹೆಚ್ಚಿನ ಕಂದಾಯ ಕೊಡುವಂತಿಲ್ಲ.

ಬಡ ರೈತ.

ಕೊಡಗು ಕಾಂಗ್ರೆಸ್ಸು

ಕಾಂಗ್ರೆಸ್ಸಿನ ಚುನಾವಣೆಯು ಜನವರಿ ಅಂತ್ಯದೊಳಗೆ ಆಗಬೇಕೆಂದು ಕಾಂಗ್ರೆಸ್ ಪರಿಷ್ಟರಿಂದ ಪ್ರಕಟವಾದ ಸರ್ಕ್ಯೂಲರೊಂದನ್ನು ಓದಿದ ಜ್ಞಾಪಕ ನನಗಿದೆ. ಆದರೆ ಕೊಡಗಿನಲ್ಲಿ ಕಾಂಗ್ರೆಸ್ ಸದಸ್ಯರನ್ನು ನೋಂದಾಯಿಸುವ ಗಲಭೆ ನಡೆದರೂ ಚುನಾವಣೆಯು ಸುಳಿವೇ ಕಂಡುಬರುತ್ತಿಲ್ಲ. ಮೇಲಾಗಿ ಯಾವ ರೀತಿ ಚುನಾವಣೆಯೂಗಬೇಕು, ಪಂಚಾಯಿತರ ಆಯ್ಕೆ ಹೇಗೆ? ಆವರ ಜವಾಬ್ದಾರಿಕೆ ಏನು? ಮೇಲಿನ ವರ್ಗದ ಸಮಿತಿಯ ಸದಸ್ಯರ ಯೋಗ್ಯತೆ ಏನು ಯಾವುದನ್ನೂ ಸ್ಥಳೀಯ ಕಾಂಗ್ರೆಸ್ಸು ಪ್ರಕಟಿಸಿಲ್ಲ ಜನತೆಯನ್ನು ಅಂಧಕಾರದಲ್ಲಿಟ್ಟು ತಾವು ತಮ್ಮ ಕುರುಡು ನೀತಿಯಿಂದ ಸಾಗುವ ವಾದರಿ ಖಂಡನೀಯವಾಗಿದೆ. ಕೊಡಗು ಎಡ್‌ಹಾಕ್ ಸಮಿತಿಯ ಅಧ್ಯಕ್ಷರು ಈ ವರ್ಷ ಕೊಡಗಿನಲ್ಲಿ ಕಾಂಗ್ರೆಸ್ ಸದಸ್ಯರೆಷ್ಟಾಗಿದ್ದಾರೆ, ಎಷ್ಟು ಪಂಚಾಯಿತಗಳು, ಎಲ್ಲೆಲ್ಲಿಗೆ ಎಂಬುದನ್ನು ಪ್ರಕಟಿಸಿ, ಶಕ್ತಿಯು ಸದಸ್ಯರಿಗೂ, ಪಂಚಾಯಿತರಿಗೂ ಇರಬೇಕಾದ ಯೋಗ್ಯತೆ, ಕೊಡಗಿನಲ್ಲಿ ಚುನಾವಣೆ ನಡೆಯುವ ತಾರೀಕು ಮೊದಲಾದುವನ್ನು ಪ್ರಕಟಿಸಬೇಕು. ಮರಣಶಯ್ಯೆಯಲ್ಲಿ ಮಲಗಿರುವ ಕಾಂಗ್ರೆಸ್ಸಿನ ಕೊಲೆಯನ್ನು ಈ ರೀತಿ ಮಾಡದೆ ಕಾಂಗ್ರೆಸ್ಸಿನ ಹೊಸ ಘಟನೆಯನ್ನು ನುಂದಿಟ್ಟು ಕಾಂಗ್ರೆಸ್ಸಿಗೆ ಜೀವನ ಕೊಡಬೇಕು. ಚುನಾವಣೆಗಳು ಹತ್ತಿರ ಬರುತ್ತಿರುವಾಗ ಇನ್ನೂ ನಿದ್ರೆ ಏಕೆ? ಕೆಲಸದ ಸಮಯ ಬಂತು ಎಚ್ಚರವಾಗಿರಿ!

ಕಾಂಗ್ರೆಸ್ ಭಕ್ತ.

ಸಂಧಾನ ಮಾಡಿರಿ!

ಕೊಡಗಿನ ಭವಿಷ್ಯದ ಬಗ್ಗೆ ಕೊಡಗು ಕಾಂಗ್ರೆಸ್ಸಿನಲ್ಲಿ ಮಹಾ ಅಂತರವಾಗಿ ಈವರೆಗೂ ಆ ಅಂತರವೂ ಅಳವೂ ದೂರವೂ ಆಗುತ್ತಾ ಬಂದು ಇದರಿಂದಾಗಿ ಅಳೆಯಲಾರದಷ್ಟು ಹಾನಿ ದೇಶಕ್ಕಾಗುತ್ತಿದೆ. ಆದರೆ ಇತ್ತಲಾಗಿ ಕೇಂದ್ರ ಸರಕಾರವು ಕೊಟ್ಟ ತಾತ್ಕಾಲಿಕ ತೀರ್ಮಾನದಿಂದಾಗಿ ಮುಂದಿನ ಐದಾರು ವರ್ಷಗಳ ವರೆಗೆ ಯಾವ ಸಂಯೋಜನೆಯೂ ಸಾಧ್ಯವಿಲ್ಲ. ಇದೇ ಮೂರು ನೊನ್ನೆಯೂಗಿ ಕೊಡಗಿಗೆ ಬಂದಿದ್ದ ಶ್ರೀ ವಿ. ಪಿ. ಮೆನನ್‌ರವರಿಂದಲೂ ವ್ಯಕ್ತವಾಯಿತಂತೆ! ಆದ್ದರಿಂದ ಈ ಹಿಂದೆ ಇದ್ದ ಪರಿಸ್ಥಿತಿ ಇಂದಿಲ್ಲ. ಕೊಡಗಿನ ಸಂಯೋಜನ ಮತ್ತು ಪ್ರತ್ಯೇಕವಾದಿಗಳು ಮುಂದೆ ಸಂಯೋಜನೆಯ ಪ್ರಶ್ನೆ ಬರುವವರೆಗೆ ಒಂದಾಗಿ ದುಡಿಯುವುದು ದೇಶ ಹಿತದೃಷ್ಟಿಯಿಂದ ಅತ್ಯವಶ್ಯ. ಈ ಒಪ್ಪಂದ ಆಗಬೇಕೆಂದು ಹಿಂದಿನಿಂದಲೂ ಹಲವರು ಕೂಗಿಕೊಂಡಿದ್ದರೂ ಪಕ್ಷರಾಜಕೀಯದ ಕೆಸರಿನಲ್ಲಿ ಕಿವಿಸವೇತ ಮುಳುಗಿದವರಿಗೆ ಈ ಕೂಗು ಕೇಳುತ್ತಿಲ್ಲ. ಈ ಸಂದರ್ಭದಲ್ಲಾದರೂ ಮತ್ತೊಮ್ಮೆ ಯತ್ನಿಸುವರೇ?

ಎಸ್. ಬಿ. ಎಂ.

ಏಕೆ?

ಕೊಡಗಿನ ಭೂಕಂದಾಯವನ್ನು ಏರಿಸುವರೆಂಬ ವಾರ್ತೆ ಕೇಳಿ ನನಗೆ ಆಶ್ಚರ್ಯವಾಯಿತು. ಕಂದಾಯವನ್ನು ಏಕೆ ಏರಿಸಬೇಕೆಂಬುದು ನನಗರ್ಥವಾಗದ ಮಾತು ಕೊಡಗಿನ ಸರಕಾರವು ಉಳುವರಿಗೆ ೫೦ ಲಕ್ಷಕ್ಕೂ ವಿಮಾ ಇದೆ. ಯುದ್ಧೋತ್ತರ ಯೋಜನೆಗೆಂದು ಇಟ್ಟ ಸುಮಾರು ೫೦ ಲಕ್ಷ ರೂಪಾಯಿ ಖರ್ಚಾಗದೆ ಹಾಗೇ ಉಳಿಯುತ್ತಿದೆ. ಯಾವ ಹೊಸ ಯೋಜನೆಗೂ ಕೆಲಸಗಾರರಿಲ್ಲವೆಂದು ಮುಂದೂಡಲಾಗುತ್ತಿದೆ. ಹಾಗಾದರೆ ಈ ಕಂದಾಯ ಯಾವುದಕ್ಕಾಗಿ? ಆಡಳಿತ ಖರ್ಚು ಹದ್ದು ಏರಿದೆ. ಅದನ್ನು ಜೋತೆ ಮೂಡದೆ, ರೈತಸಿಗಿಂಥಾ ಅನೇಕ ಪಾಲು ಮಿಗಿಲಾದ ಉತ್ಪತ್ತಿ ಇರುವ ನಾಕರರ ವಿಚಾರ ಆಲೋಚಿಸದೆ ಬಡ ರೈತನ ಹೊಟ್ಟೆಗೆ ಹೊಡೆಯುವ ಈ ಯತ್ನವೇಕೆ? ಅದರಲ್ಲೂ ಸರಕಾರವು ಇಂಥಾ ನಿಶ್ಚಿತ ಯೋಜನೆಗಾಗಿ ಹೆಚ್ಚು ಖರ್ಚಿದೆ. ಈಗಿರುವ ಹಣ ಸಾಲದೆಂದು ಊಹಿಸುವದಾದರೆ ಅಂಥಾದ್ದನ್ನು ಸ್ಪಷ್ಟಪಡಿಸಿ ಅದರಿಂದ ಜನರಿಗಿರುವ ಹಿತವನ್ನು ಬೋಧಿಸಿ ಕಂದಾಯ ಏರಿಸುವದಾದರೆ ಅದಕ್ಕೊಂದು ಅರ್ಥವಿದೆ. ಸರಕಾರವು ಯಾವುದೇ ಪ್ರಗತಿಶೀಲ ಉದ್ಯಮವನ್ನು ಮಾಡದೆ ಇಂಥ ಉಳಿತಾಯವನ್ನು ಇಟ್ಟುಕೊಂಡು ಹೊಸ ಕಂದಾಯ ಹಾಕುವದೆಂದರೆ ರೈತರಿಗೆ ತೀರಾ ಅಸಮಾಧಾನಕರ. ಇಂಥಾದ್ದಕ್ಕೆ ಜನ ಪ್ರತಿನಿಧಿಗಳು ಎಡೆಕೊಡಬಾರದು.

ಬಿ ಕ ಶಂಭಪ್ಪ.

ಕಿಗ್ಗಟ್ಟುನಾಡು ಹೈಸ್ಕೂಲು ಮತ್ತು ಸರಕಾರ

ಪತ್ರಿಕೆಗಳಲ್ಲಿ ಬಾಕ್ಸಿಗಳನ್ನು ಬರೆದು ನನ್ನ ಆತ್ಮಪ್ರಿಯನ್ನು ಸೂಚಿಸಿದುದಲ್ಲದೆ ಚೀಫ್ ಕಮಿಷನರ ಜತೆಯಲ್ಲೂ ವಿಶೇಷ ಡಿ. ಇ. ಓ. ರವರ ಜತೆಯಲ್ಲೂ ಹೈಸ್ಕೂಲಿನ ವಿಷಯವಾಗಿ ಮಾತನಾಡಿದ್ದೇನೆ. ಆದರೆ ಸರಕಾರದವರ ಅಭಿಪ್ರಾಯ ಇನ್ನೂ ತಿಳಿದಿರುವಿವುಲ್ಲ

ಒಂದನೆಯದಾಗಿ ಸರಕಾರದವರು ಈ ವರ್ಷ ಹೈಸ್ಕೂಲು ಕಟ್ಟಡವನ್ನು ಕಟ್ಟಿದವ ಹಾಗೆ ಕಾಣುವುದಿಲ್ಲ. ಸರಕಾರದವರು ಪೂರ್ವಕಾಲದ ಈ ಮುಂದವರ್ತನೆಯನ್ನು ಬಿಡಬೇಕು. ಈ ಮೊದಲೇ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಹಾಗೆ ಜನರ ಅಭಿಪ್ರಾಯವನ್ನು ಸರಕಾರದವರು ಗಮನಿಸಬೇಕು. ಮಕ್ಕಳಿಗೆ ವಿದ್ಯೆ ಕಲಿಸುವುದಕ್ಕೋಸ್ಕರ ನಾಡಿನವರು ಒಂದು ಲಕ್ಷ ಚಿಲ್ಲರೆ ರೂ. ಗಳನ್ನು ವಸೂಲು ಮಾಡಿ ಶಾಲೆಗೆ ಬೇಕಾದ ಜಾಗವನ್ನೂ ಕಟ್ಟಡವನ್ನೂ ಕಟ್ಟಿಸಿದುದಲ್ಲದೆ ಸರಕಾರದವರಿಗೆ ನಲ್ವತ್ತು ಸಾವಿರ ರೂಪಾಯಿಗಳನ್ನು ಶಾಲಾ ಕಟ್ಟಡವನ್ನು ಕಟ್ಟಸಲಿಕ್ಕೆ ಕೊಟ್ಟದ್ದಾಗಿದೆ. ಆದರೂ ಶಾಲಾಕಟ್ಟಡ ಕಟ್ಟಸಲಿಕ್ಕೆ ನಿಧಾನ ಏನು? ಜೊತೆಗೆ ಈ ಶಾಲೆಯು ಕಟ್ಟಡವನ್ನು ಬೇರೆ ಸ್ಥಳದಲ್ಲಿ ಕಟ್ಟಲು ನಿರ್ಧರಿಸಿದ್ದಾರೆಂದು ತಿಳಿಯುತ್ತೇವೆ. ಇದಂತೂ ತಿಕ್ಕಾಟಕ್ಕೆ ಎಡೆಕೊಡದಿರದು. ಹೀಗೆಲ್ಲಾ ಆಗಿ ಈ ವರ್ಷ ಕಟ್ಟಡ ಆಗದಿದ್ದರೆ ಮಕ್ಕಳ ಗತಿ ಏನು?

ಮಕ್ಕಳಿಗೆ ವಿದ್ಯೆ ಕಲಿಸುವ ಉತ್ತಮ ಕಾರ್ಯಕ್ಕಾಗಿ ಎಷ್ಟೋ ಜಾಗವನ್ನು ಜನರು ಮುಫತ್ತಾಗಿ ಕೊಟ್ಟಿದ್ದಾರೆ. ಇದರ ಕಾಡು ಕಡಿದು ಜಾಗ ವ್ಯವಸಾಯವಾಗಬೆ. ಇಂಥಾ ಜಾಗದಲ್ಲಿ ಶಾಲೆಯನ್ನು ಕಟ್ಟಿಸದೇ ಈಗ ಬೇರೆ ಜಾಗ ಹುಡುಕುವುದಂದರೆ ಅದು ಅನ್ಯಾಯವಲ್ಲವೇ?

ಕೂಡಲೇ ಸಂಬಂಧಪಟ್ಟ ಕೋಣೆಗಳನ್ನಾದರೂ ಕಟ್ಟಸದಿದ್ದರೆ ಮಕ್ಕಳಿಗೆ ಓದಲಿಕ್ಕೆ ಸ್ಥಳವೆಲ್ಲಿ? ಅಲ್ಲದೆ ಪಾಠಕ್ಕೆ ಬೇಕಾದ ಸಾಮಾನುಗಳನ್ನು ಇಟ್ಟುಕೊಳ್ಳುವುದಕ್ಕೂ ಸಹ ಸ್ಥಳವಿಲ್ಲ. ಅಧ್ಯಾಪಕರಿಗೆ ಕೂತುಕೊಳ್ಳಲಿಕ್ಕೂ ಸ್ಥಳವಿಲ್ಲ. ಆದುದರಿಂದ ಸರಕಾರದವರು ಒಡನೆ ಕಟ್ಟಡದ ಕೆಲಸವನ್ನು ಕೈಕೊಳ್ಳಬೇಕು.

C. K. T.

ವಿಷಾದ.

ತಾರೀಕು ೨೮-೧೦-೪೯ರ ಕೊಡಗು ಪತ್ರಿಕೆಯಲ್ಲಿ 'ಓರ್ವ ಗೃಹಿಣಿ'ಯೆಂಬ ಹೆಸರಿನಿಂದ ಬರೆದ ಕೊಡಗಿನ ಭವಿಷ್ಯವೆಂಬ ಲೇಖನದಲ್ಲಿ ಚೆಪ್ಪುಡೀರ ಕಂಟೂಬದರೆಂಬವರು ಜಹಗೀರು ಹಂಚಿದಾಗ ಅನ್ಯಾಯ ಮಾಡಿದಳೆಂಬ ಅನಾದರಣೆ ಇದೆಯೆಂದು ಕೈತಪ್ಪಿನಿಂದ ಪ್ರಕಟವಾಗಿದೆ. ಒಬ್ಬ ವ್ಯಕ್ತಿಯನ್ನು ತೇಕಿಸಲು ಒಂದು ಕುಟುಂಬದ ಹೆಸರನ್ನು ಬಳಸಿ ಕಲಂಕಗೊಳಿಸುವಗುರಿ ಲೇಖಕರದ್ದಲ್ಲವೆಂತ್ತು ಪತ್ರಿಕೆಯವರಲ್ಲಿ ಕೈತಪ್ಪಿನಿಂದಾದ ಇದಕ್ಕೆ ವಿಷಾದಿಸಿ ಪಡುತ್ತೇವೆ.

ಸಂಪಾದಕ.

ಮದ್ಯಪಾನದ ಕುರಿತು ಪಂ. ನೆಹರುಗಳ ಹಿತೋಕ್ತಿ

ಭಾರತದ ಮಂತ್ರಿ ಮಂಡ್ರಿ ಪಂಡಿತ ಜವಾಹರಲಾಲ ನೆಹರುಗಳು ತಾ. ೨೮ರಲ್ಲಿ ನಾಗಪುರದಲ್ಲಿ ಕೂಡಿದ ಸಭೆಯಲ್ಲಿ ಮದ್ಯ ಪಾನದ ಕುರಿತು ಮಾತನಾಡುತ್ತಾ ಇದೀಗ ಮದ್ಯಪಾನ ನಿಷೇಧದಿಂದಾಗಿ ಜನತೆಗೆ ಬಹಳ ಕೊಂದರೆಯಾಗಿದೆ ಮೂಲತಃ ಅಲ್ಲಿ ಸರಕಾರಕ್ಕೆ ಸಹ ಆದಾಯ ನಷ್ಟವಾಗಿರುವುದೊಂಬುದನ್ನು ನಾನು ಅರಿತಿರುವೆನು. ಭಾರತದಲ್ಲಿ ಈಗ ಆರ್ಥಿಕ ಪರಿಸ್ಥಿತಿಯು ಕೆಟ್ಟುಹೋಗಿ ಭಯಂಕರವಾದ ಆಪತ್ತಿಗೆ ಒಳಗಾಗಿರುವುದು. ಇಂತಹ ಪರಿಸ್ಥಿತಿಯು ನಿವಾರಣೆಯೊಂದುವ ತನಕ ಮದ್ಯಪಾನದ ಕುರಿತಾಗಿ ಯಾವ ಕಾರ್ಯಕ್ರಮವನ್ನು ಕೈಕೊಳ್ಳಲಾಗುವುದಿಲ್ಲ' ಎಂದು ತಿಳಿಸಿದರು.

THE WARDEN INSURANCE CO., Ltd.

Head Office: Bombay.

LIFE, FIRE, ACCIDENT, MOTOR & W. C. INSURANCES.

Managing Director; – **S. H. THAKER.**

Business in force	Rs. 5,00,00,000
Assets	,, 1,00,00,000
Income	,, 35,00,000

Also **LOCAL MANAGERS OF**

THE LONDON GUARANTEE & ACCIDENT CO., Ltd.
(Incorporated in England)

Assets Exceed Rs. 10,00,00,000

a Subsidiary Company of

THE PHOENIX ASSURANCE CO., Ltd.
(One of the Largest Assurance Companies in the World)

Assets Exceed Rs. 45,00,00,000

Transact **FIRE INSURANCE**

Enquiries for representation solicited.

Apply to;

Chief Agency Office *or* **A. S. Aiyappa,**
Virajpet (Coorg) *Branch Secretary,*
Gandhinagar,
BANGALORE CITY

ಭದ್ರತೆ! 17 ವರ್ಷಗಳ ಪರಿಪಕ್ವ ಅನುಕೂಲತೆ !!
ಅನುಭವಶೀಲತೆ!!

ದಿ ವಿಜಯ ಬ್ಯಾಂಕ್ ಲಿಮಿಟೆಡ್

ಮುಖ್ಯ ಖಜೇರಿ,

ಕದ್ರಿ ರೋಡ್, ಮಂಗಳೂರು.

ನಿರಖು ತೇವಣಾತಿ ಬಡ್ಡಿದರ:-

3	ತಿಂಗಳು	3%
6	,,	3½%
12	,,	3¾%
24	,,	4 %

ರೂಪಾಯಿ ೧೫,೦೦೦ಕ್ಕೆ ಮಿರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂಥಾ ¼% ಹೆಚ್ಚಿಗೆ.

ಶಾಖೆಗಳು:– ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮಿರಿದೆ.

ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:– **ಏಜಂಟ್,**

ಮಡಿಕೇರಿ ಶಾಖೆ, ಮಡಿಕೇರಿ.

ಬಟ್ಟೆ ಬೇಕೆ?

ಮದುವೆ ಸಮಾರಂಭಗಳಿಗೆ ಬೇಕಾದ ನಾನಾ ರೀತಿಯ ಬೆಂಗಾಲ್ ಜೆನಾರಿಸ್ ಸಿಲ್ಕ್‌ಗಳು, ಸೇಲಂ, ಮಧುರಾ ಜವುಳಿಗಳು, ಉತ್ತಮ ಉಲನ್ ಬಟ್ಟೆಗಳು ಕಳೆದ ವರ್ಷದ ಬೆಲೆಗಿಂಥಾ ಶೇಕಡ ೫೦% ರಷ್ಟು ಕಡಿಮೆ ದರದಲ್ಲಿ ದೊರೆಯುವವು.

ಅತ್ಯುತ್ತಮ ಮೂದರಿಯ ಜೆನಾರಿಸ್ ಮತ್ತು ಕಾಶ್ಮೀರ್ ಬಟ್ಟೆಗಳು ಸದಾ ದೊರೆಯುವವು.

ನಾನೂರು ರೂಪಾಯಿಗಳಿಗೆ ಮೇಲ್ಪಟ್ಟ ಒಟ್ಟೆ ತೆಗೆಯುವವರು ಈ ಪತ್ರಿಕೆಗೆ ತಿಳಿಸಿದಲ್ಲಿ ಅವರವರ ಮನೆ ಬಾಗಿಲಿಗೆ ತಂದು ಸರಬರಾಯಿ ಮಾಡಲಾಗುವದು.

ಒಮ್ಮೆ ಬಂದು ಪರೀಕ್ಷಿಸಿರಿ.

ವಲ್ಲಿ ಮೊಹಿದಿನ್ ಸಾಹೇಬ್ & ಬ್ರದರ್,
ಸಿಲ್ಕ್ ಮತ್ತು ಕಾಟನ್ ವ್ಯಾಪಾರಿಗಳು.
ವೀರಾಜಪೇಟೆ (ಕೊಡಗು)

12–2

ನೋಟೀಸು.

ಕೊಡಗು ಮಾಜಿ ಸಿಪಾಯಿಗಳ ಸಂಘವು ವೀರಾಜಪೇಟೆಯಲ್ಲಿ ಸ್ಥಾಪಿಸಲ್ಪಟ್ಟಿದೆ. ಕೊಡಗಿನ ಎಲ್ಲಾ ಮಾಜಿ ಸಿಪಾಯಿಗಳು ರೂಪಾಯಿ ಒಂದನ್ನು ಈ ಕೆಳಗೆ ರುಜು ಹಾಕಿದವರಿಗೆ ಕೊಟ್ಟು ಮೆಂಬರಾಗಬೇಕಾಗಿ ಈ ಮೂಲಕ ಕೇಳಿಕೊಳ್ಳಲಾಗಿದೆ. ಕೊಡಗಿನ ಎಲ್ಲಾ ಮಾಜಿ ಸಿಪಾಯಿಗಳ ಆರ್ಥಿಕ, ನೈತಿಕ ಅಭಿವೃದ್ಧಿಗಾಗಿ ಈ ಸಂಘವನ್ನು ಸ್ಥಾಪಿಸಿದ್ದಾಗಿದೆ. ಆದ್ದರಿಂದ ಈ ಸುಸಮಯವನ್ನು ಯಾರು ಕಳೆದುಕೊಳ್ಳಬಾರದು.

ಯೆನ್. ಬಿ. ಉತ್ತಪ್ಪ,
5–2 ಪ್ರೆಸಿಡೆಂಟ್,
ಕೊಡಗು ಮಾಜಿ ಸಿಪಾಯಿಗಳ ಸಂಘ.

ಪ್ರಕಟಣೆ.

ಕೊಡಗು ಮಾಜಿ ಸಿಪಾಯಿಗಳ ಸಹಕಾರ ಟ್ರಾನ್ಸ್‌ಪೋರ್ಟ್ ಸಂಘವನ್ನು 5–2

ಕೊಡಗು ಮಾಜಿ ಸಿಪಾಯಿಗಳ ಸಂಘದ ಶಾಖೆಯಾಗಿ ಮಡಿಕೇರಿಯಲ್ಲೂ ತೆರೆಯಲು ತೀರ್ಮಾನಿಸಲಾಗಿದೆ. ಶೇರು 1ರ ರೂ. 10/– ಗಳಂತೆ ಪ್ರತಿ ಒಬ್ಬ ಮೆಂಬರನು ಶೇರು ಹೊಂದಿಕೊಳ್ಳಬಹುದು. ಆದರೆ ಒಬ್ಬನಿಗೆ ನೂರು ಶೇರುಗಳಿಗಿಂತ ಹೆಚ್ಚು ಶೇರುಗಳನ್ನು ಕೊಡಲಾಗುವುದಿಲ್ಲ. ಮೆಂಬರುಗಳು ಈ ಕೆಳಗೆ ರುಜು ಮಾಡಿದವರಿಗೆ ಮನಿಯಾರ್ಡರ್ ಮೂಲಕ ಹಣ ಕಳುಹಿಸತಕ್ಕದ್ದು. ಸರ್ಕಾರಿ ಉದ್ಯೋಗಸ್ಥರೂ ಮೆಂಬರುಗಳಾಗಿ ಸೇರಬಹುದು. ಪಾನತಿಯಾದ ಮೊಬಲಗಿಗೆ ತತ್ಕಾಲದ ರಶೀತಿ ಕೊಡಲಾಗುವುದು. ಸಂಘವು ರಿಜಿಸ್ಟರ್ ಆದನಂತರ ಮೆಂಬರುಗಳ ಹೆಸರುಗಳನ್ನು ರಿಜಿಸ್ಟರ್ ಮಾಡಲಾಗುವುದು.

ಯೆನ್. ಬಿ. ಉತ್ತಪ್ಪ,
ಪ್ರೆಸಿಡೆಂಟ್,
ಕೊಡಗು ಮಾಜಿ ಸಿಪಾಯಿಗಳ ಸಂಘ.

ಹರಾಜು ನೋಟೀಸು.

ನಂ.	ಟೋಲ್‌ಗೇಟ್‌ಗಳ ಹೆಸರು.	ತಾರೀಕು	ಹರಾಜು ಸ್ಥಳ.
1.	ಗೋಣಿಕೊಪ್ಪ ಮಾರ್ಕೆಟ್	22–1–1950	ಗೋಣಿಕೊಪ್ಪ ನಾಡಫೀಸು.
2.	ಹುದಿಕೇರಿ ಮಾರ್ಕೆಟ್	23–1–1950	ಹುದಿಕೇರಿ ನಾಡಫೀಸು.
3.	ಸಿದ್ದಾಪುರ ಮಾರ್ಕೆಟ್	29–1–1950	ಸಿದ್ದಾಪುರ ನಾಡಫೀಸು.
4.	ಅಮ್ಮತ್ತಿ ಮಾರ್ಕೆಟ್	29–1–1950	ಸಿದ್ದಾಪುರ ನಾಡಫೀಸು.
5.	ಆನೆ ಜೋಕೂರು, ಹುಟ್ಟು, ಸಿದ್ದೇಶ್ವರ ಗದ್ದಿಗೆ ಮತ್ತು ಮಾಪುಕೂಟ ಟೋಲ್‌ಗೇಟುಗಳು	1–2–1950	ವೀರಾಜಪೇಟೆ ನಾಡಫೀಸು.
6.	ಮೂರ್ನಾಡು ಮಾರ್ಕೆಟು ಕೊಯನಾಡು ,, ಚಿಟ್ಟಳ್ಳಿ ,, ಸಂಪಾಜೆ ಟೋಲ್‌ಗೇಟು ಫ್ರೇಜರ್‌ಪೇಟೆ ,, ಶಿರಂಗಾಲ ,,	3–2–1950	ಮಡಿಕೇರಿ ನಾಡಫೀಸು.
7.	ಶನಿವಾರಸಂತೆ ಮಾರ್ಕೆಟ್ ಎಡೆಹಳ್ಳಿ ಟೋಲ್‌ಗೇಟ್ ಹೆಬ್ಬಾಲೆ ಟೋಲ್‌ಗೇಟ್ ನಿಲುವಾಗಿಲು ,,	4–2–1950	ಶನಿವಾರಸಂತೆ ನಾಡಫೀಸು.
8.	ಸುಂಟಿಕೊಪ್ಪ ಮಾರ್ಕೆಟು ಜಂಬೂರು ಮಾರ್ಕೆಟು	5–2–1950	ಸುಂಟಿಕೊಪ್ಪ ನಾಡಫೀಸು.

ಐ. ಪಿ. ಕಾರ್ಯಪ್ಪ,
2–1 ಪ್ರೆಸಿಡೆಂಟ್
ಕೊಡಗು ಜಿಲ್ಲಾ ಬೋರ್ಡ್.

ಗಮನಿಸಿರಿ!

ದಿನವಹಿ ಹೆಚ್ಚುತ್ತಿರುವ ಗ್ರಾಹಕರ ಬೇಡಿಕೆಯನ್ನು ಸಲ್ಲಿಸಲು ನಮ್ಮ ಅಂಗಡಿಯನ್ನು ವಿಸ್ತರಿಸಿರುವದಲ್ಲದೆ ಅತ್ಯುತ್ತಮ ಸಿಲ್ಕ್, ಉಲನ್ ಮತ್ತು ಮಿಲ್ ಬಟ್ಟೆಗಳ ಯಂಥೇಚ್ಛ ಸ್ಟಾಕ್ ಇಡಲಾಗಿದೆ.
ಯಾವ ನಮೂನೆಯ ಬಟ್ಟೆಗೂ ಅದರ್ಶವೆನಿಸಿದೆ.
ಆರ್ಡರ್ ಪ್ರಕಾರ ಅತೀ ಆಧುನಿಕ ರೀತಿಯಲ್ಲಿ
ಉಡುಪುಗಳನ್ನು ಹೊಲಿದು ತಯಾರಿಸಿ
ಕೊಡಲಾಗುವದು.

ಬಟ್ಟೆಯ ವಿಚಾರದಲ್ಲಿ ಏನು ಬೇಕು! ಪಟ್ಟೊ ಬ್ರದರ್ಸ್ ಎಳ್ಳಿದ ಕೈ!

ಪಟ್ಟೊ ಬ್ರದರ್ಸ್,
ಲಕ್ಷ್ಮೀ ಬಿಲ್ಡಿಂಗ್ಸ್,
52–2 ಟೌನ್‌ಹಾಲಿನ ಎದುರು, ಮೈಸೂರು

ಕರ್ನಾಟಕದ ರಾಜಿನಾಮೆಗಳು

ಹಿಂದೆಗೆದುಕೊಳ್ಳಲ್ಪಡುವವೆ?

ಕರ್ನಾಟಕ ಪ್ರಾಂತರಚನೆಯನ್ನು ತಡೆಯುತ್ತಿರುವವರಾರು ?

ಕಳೆದವಾರ ನಾಗಪುರದಲ್ಲಿ ಮೂತನಾಡುತ್ತಾ, ಕಾಂಗ್ರೆಸು ಭಾಷಾವಾರು ಪ್ರಾಂತ ರಚನೆಯ ತತ್ವವನ್ನು ಒಪ್ಪಿಕೊಂಡಿರುವದಾದರೂ ಆಂಧ್ರದ ಹೊರತು ಇತರ ಪ್ರಾಂತಗಳು ಅಸ್ತಿತ್ವದಲ್ಲಿ ಬರಲು ಕೆಲವು ವರ್ಷ ಕಾಯಬೇಕಾಗಿದೆಯೆಂದು ನೆಹರೂರವರೆಂದರು. ಕರ್ನಾಟಕದ ಆಶೆ ಆಕಾಂಕ್ಷೆಗಳ ಕುರಿತು ಪಂಡಿತ್ ನೆಹರೂರವರಿಗೆ ಸೈಯುಕ್ತಿಕ ವಿರೋಧ ಏನೂ ಇಲ್ಲ. ಹಾಗಿದ್ದರೆ ತಪ್ಪು ಎಲ್ಲಿ ಆದಗಿದೆ?

ಇದೀಗ ಕೆಲವೆಡೆಗಳಲ್ಲಿ, ಸ್ವಾರ್ಥ, ಅಧಿಕಾರ ಪ್ರೇರಿತ, ಜಾತೀಯವಾದಿ ಪ್ರಗತಿ ವಿರೋಧಿ ಶಕ್ತಿಗಳೇ ಭಾಷಾವಾರು ಸ್ವಯಂ ನಿರ್ಣಯದ ಹೆಕ್ಕು ಕಾರ್ಯರೂಪಕ್ಕೆ ಬರಲು ನೊಡ್ಡ ತಡೆಗಳಾಗಿವೆಯೆಂದು ಹೇಳಲಾಗುತ್ತಿದೆ. ಇದು ಸರಿಯೆಂದು ಹೇಳಲಾಗುವುದಿಲ್ಲ. ಇಂಥ ಶಕ್ತಿಗಳು ಯಾವಾಗಲೂ ಭಾಷಾವಾರು ಪ್ರಾಂತಗಳ ಜನಿಸಾರಿ ನಗರದ ಸೆರವನು ಪಡೆಯಬಹುದು. ಆದರಿಂದು ಅಂಥ ವರ್ಗವೇ ಭಾಷಾವಾರು ಪ್ರಾಂತ ನಿರ್ಮಾಣದ ಜಿಳವಳದಲ್ಲಿ ಪ್ರಥಮ ಪಂಕ್ತಿಯಲ್ಲಿದೆ.

ಬೊಂಬಾಯಿಯಲ್ಲಿರುವ ಸರ್ದಾರ್ ಪಟೇಲರವರು ಕರ್ನಾಟಕದ ವಿಚಾರವಾಗಿ ಅವರಿಗೆ ಒಪ್ಪಿಸಲ್ಪಟ್ಟಿರುವ ಎಲ್ಲ ಹೊಸ ಮಾಹಿತಿಯನ್ನು ಸಂಗ್ರಹಿಸಿ, ಕರ್ನಾಟಕದ ಪ್ರಶ್ನೆಯನ್ನು ಅಭ್ಯಾಸಿಸಿತಿಮರಾಗಿ ಹೇಳಲಾಗುತಿದೆ. ಬೈಸೂರಿನಿಂದ ಇಲ್ಲಿಗೆ ಆಗಮಿಸಿದ್ದ ಬೈಸೂರಿನ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರಿಂದಿಗೆ ಉಪಪ್ರಧಾನಿ ಸರ್ದಾರ್ ಪಟೇಲರು ಸುದೀರ್ಘ ಮಾತುಕತೆ ನಡೆಸಿದ್ದಾರೆ ಈ ಮಾತುಕತೆಗಳಲ್ಲಿ ಕರ್ನಾಟಕದ ಪ್ರಶ್ನೆಯ ಪೂರ್ವಾಪರಗಳನ್ನೆಲ್ಲ ಪುನಶ್ಚ ಚರ್ಚಿಸಲಾಗಿದೆಯೆಂದು ಹೇಳಲಾಗುತ್ತಿದೆ. ಈ ಮಾತುಕತೆಗಳಿಂದಾಗಿ ಯಾವ ನಿರ್ಣಯಗಳೂ ಇನ್ನೂ ತವಕ ಪ್ರಕಟವಾಗಿಲ್ಲ.

ಆದರೂ ಈಗ ಕರ್ನಾಟಕದ ಕೊಗು ಅರಣ್ಯರೋದನವಾಗಬಹುದೆಂದು ತೋರುತ್ತಿರುವುದಿಲ್ಲ. ಪ್ರಾಂತಿಕ ಹಾಗೂ ಕೇಂದ್ರ ಶಾಸನ ಸಭೆಗಳ ಸದಸ್ಯತ್ವಕ್ಕೆ ಕನ್ನಡಿಗ ಪ್ರತಿನಿಧಿಗಳು ಕೊಟ್ಟ ರಾಜೀನಾಮೆಗಳು ಹಿಂತೆಗೆದುಕೊಳ್ಳಲ್ಪಡುವುವೆಂದು ತಿಳಿಯುತ್ತದೆ.

ಇಂಥ ಪ್ರತಿನಿಧಿಗಳು ಕಾಂಗ್ರೆಸಿನಿಂದಲೇ ಹೊರಬರುವುದು ಸೂಕ್ತವೆಂದು ತೋರುವುದಿಲ್ಲ. ಕೆ.ಪಿ.ಸಿ.ಸಿ. ಅಧ್ಯಕ್ಷ, ಕಾಂಗ್ರೆಸ್ ಕಾರ್ಯದರ್ಶಿಯವರು ಸದಸ್ಯ, ಶ್ರೀನಿವಾಸ ನಿಜಲಿಂಗಪ್ಪನವರನ್ನು ಈ ವಿಚಾರ ಪ್ರಸ್ತಾಪಿಸಿದಾಗ, ತನ್ನ ಜೀವನವನ್ನೆಲ್ಲ ಕಾಂಗ್ರೆಸ್ಸಿಗಾಗಿ ಮುಡಿಪಿಟ್ಟಿದ್ದು, ಈಗ ಆ ಸಂಸ್ಥೆಯಿಂದ ಹೊರಬರುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿರುವರಾಗಿ ತಿಳಿದುಬರುತ್ತದೆ.

ಆದರೂ ಕರ್ನಾಟಕದ ಮುಂದಾಳುಗಳಲ್ಲಿ ಒಡಕು ಅತ್ಯಂತ ಸಂಭವನೀಯವೆಂದು ತೋರುತ್ತದೆ. ಶ್ರೀ ಕಾರಂತ ಮತ್ತೆ ಇವರನ್ನನುಸರಿಸಬಹುದಾದ ಇತರರು ಕಾಂಗ್ರೆಸ್ ಧೋರಣೆಗೆ ಒಪ್ಪಲಾರದಾದ ಕಾರಣ, ಅವರು ಹೊರಬರಬಹುದು.

ಮೈಸೂರಿನ ಉದಾಸೀನವೇ ಕರ್ನಾಟಕ ಪ್ರಾಂತ ನಿರ್ಮಾಣದ ತಡೆಯಾಗಿ ನಿಂತಿದೆಯೆಂಬ ನಂಬಿಕೆ ಕೆಲವರಲ್ಲಿ ಬಲವಾಗಿದೆ.

ಕರ್ನಾಟಕದ ಇತರ ಭಾಗಗಳೊಂದಿಗೆ ಸಹಕರಿಸಲು ಮೈಸೂರು ಏನಾದರೊಂದು ಕಾರಣ ಹಿಡಿದು ನಿರಾಕರಿಸುತ್ತಿದೆ. ಮೈಸೂರಿನ ಮಹಾರಾಜರು ಕರ್ನಾಟಕದ ರಾಜಪ್ರಮುಖರಾಗಲು ಒಪ್ಪದ ಯೂನಿಯನ್ ಕರ್ನಾಟಕದ ಮುಂದಾಳುಗಳ ನಡತೆ, ಆತ್ಯಾಲಿಕವಾಗಿರೂದರೂ ಈ ಪ್ರಸಕ್ತೆಗೆ ಒಪ್ಪಿಗೆ ಕೊಡುವಂತೆ ಪ್ರಯತ್ನಗಳಾಗಿರುವುದು ತಿಳಿದಿದೆ. ಒಮ್ಮೆ ಕರ್ನಾಟಕ ಪ್ರಾಂತ ನಿರ್ಮಾಣವಾದರೆ ಮಹಾರಾಜ ಪ್ರಶ್ನೆಯನ್ನು ಬಗೆಹರಿಸುವುದು ಕಷ್ಟವಾಗಲಾರದೆಂಬ ನಂಬಿಕೆಯೇ ಇವಕ್ಕೆ ಕಾರಣ.

ಈಗ ತಿಳಿದು ಬರುತ್ತಿರುವಂತೆ, ಕರ್ನಾಟಕ ಯೋಚಿಸಿದ 'ಸತ್ಯಾಗ್ರಹ' ಕಾರ್ಯರೂಪಕ್ಕೆ ಬರುವಂತಿಲ್ಲ. ಕಾಂಗ್ರೆಸ್ ಹೈಕಮಾಂಡಿನ ನಿರ್ಣಯವನ್ನು ಕೆ.ಪಿ.ಸಿ.ಸಿ. ಒಪ್ಪಿಕೊಳ್ಳಬಹುದು.

ಆಂಧ್ರ ಪ್ರಾಂತ ರಚಿಸಲ್ಪಟ್ಟ ಅದರ ಜಯಾಪಜಯಗಳನ್ನು ನೋಡುವ ತನಕ ಕರ್ನಾಟಕದ ಮುಂದಾಳುಗಳು ಸುಮ್ಮನಿರುವರೆಂದು ಬಲ್ಲವರು ಗುಂಪಿನಲ್ಲಿ ಹೇಳಲಾಗುತ್ತಿದೆ. ಆದರೂ ಇಂಥ ಶಾಂತಿ, ಕರ್ನಾಟಕದ ನ್ಯಾಯವಾದ ಹಕ್ಕುಗಳನ್ನು ಆಂಧ್ರ ಅಪಹರಿಸುವ ಪ್ರಯತ್ನ ಮಾಡುವುದಿಲ್ಲವೆಂಬ ಶರ್ತದಿಂದ ನಿಯಂತ್ರಿತವಾಗಿದೆ.

ಈ ರೀತಿ ಕರ್ನಾಟಕದ ಪ್ರಾಂತರಚನೆಯ ವಿಷಯದಲ್ಲಿ ನಡೆಯುತ್ತಿರುವ ಗೊಂದಲದ ನಡುವೆ ಕರ್ನಾಟಕ ಮತ್ತು ಮೈಸೂರು ಸೋಷಲಿಸ್ಟ್ ಪಾರ್ಟಿಯವರು ಒಂದು ಸನ್ಮೋಳನವನ್ನು ಕರೆದು ಕೂಡಲೇ ಕರ್ನಾಟಕ ಪ್ರಾಂತರಚನೆಯಾಗಬೇಕೆಂದೂ, ಅದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳುವ ಉದ್ದೇಶದಿಂದ ಇದೇ ತಿಂಗಳಾಂತ್ಯದೊಳಗೆ ಸಭೆ ಸೇರುವ ಯೋಜನೆ ಮಾಡಿದ್ದಾರೆ. [illegible] ಲಿಪ್ತವಲ್ಲದೆ ಇತರ ಪ್ರಾಮುಖ್ಯ ಮಹನೀಯರನ್ನೂ ಕರೆಯಲಿರುವರೆಂದು ತಿಳಿದು ಬರುತ್ತದೆ

ಜನತೆಯ ತೃಪ್ತಿಯೇ

ದೇಶದ ಭದ್ರತೆ.

'....ಔದ್ಯೋಗಿಕ ಕೆಲಸಗಾರರ ಕರ್ತವ್ಯಪಾಲನೆ ಮತ್ತು ದೇಶಪ್ರೇಮ ಇವು ಅಭಿನಂದನೀಯ. ದವಸಧಾನ್ಯಗಳ ಬೆಲೆಗಳಲ್ಲಿ ಗಮನಾರ್ಹ ಇಳಿತವು ಆಗದಿದ್ದರೂ, ತಮ್ಮ ವೇತನಗಳಲ್ಲಿ ನಿಜವಾದ ಏರಿಕೆ ಆಗದಿದ್ದರೂ ಔದ್ಯೋಗಿಕ ಹಳ್ಳಾಹಳ್ಳಿನಮ್ಮ ದೇಶದಲ್ಲಿ ಇತರ ದೇಶಗಳಿಗಿಂತ ಬಹಳ ಕಡಿಮೆ.'

'ಆದಾಗ್ಯೂ ಕಾರ್ಮಿಕರ ದೇಶಪ್ರೇಮದ ಮೇಲೆ ನಾವು ಸದಾ ಹೊಂದಿಕೊಂಡಿರುವುದು ಆದೂ ದೇಶದಲ್ಲೆಲ್ಲ ಪ್ರತಿಪಕ್ಷಗಳು ಸರಕಾರಕ್ಕೆ ಕಲಂಕ ಹಚ್ಚುವ ನಿಮಿತ್ತ ಕೆಲಸಗಾರರನ್ನು ಶೋಷಿಸುತ್ತಿರುವಾಗ, ಒಳಿತಲ್ಲ. ಆದುದರಿಂದ ದುಡಿಮೆಗಾರರ ಜೀವನ ಸ್ಥಿತಿಯನ್ನು ಸುಧಾರಿಸುವುದಕ್ಕೆ ಸರ್ವ ಯತ್ನ ಮಾಡಬೇಕಾಗಿದೆ.'

ಈ ಮಾತುಗಳು ಪಟಿಪಟಿ ಟೀಕಾಕಾರರಿಂದ ಬಂದಿಲ್ಲ; ಆಡಳಿತೆಯ ನ್ಯೂನತೆಗಳನ್ನು ಎತ್ತಿತೋರಿಸಿ ಕಾಂಗ್ರೆಸಿಗರ ಮುಖಕ್ಕೆ ಮಸಿ ಬಳಿಯುವವರಿಂದ ಬಂದಿಲ್ಲ; ಸಮತಾವಾದೀ ಸಮಾಜವಾದೀ ನಾಯಕರಿಂದ ಬಂದಿಲ್ಲ ಇವು ಕೇಂದ್ರ ಸರಕಾರದ ಕಾರ್ಮಿಕ ಮಂತ್ರಿ ಜಗಜ್ಜೀವನ ರಾಮರವರು, ನೈಸೂರಿನಲ್ಲಿ ಈಜೆಗೆ ನೆರೆದ ಕಾರ್ಮಿಕ ಮಂತ್ರಿಗಳ ಸಮ್ಮೇಳನದಲ್ಲಿ ತನ್ನ ಅಧ್ಯಕ್ಷಭಾಷಣದಲ್ಲಿ ಆಡಿದ ಮಾತುಗಳು.

ಜೀದೇ ದಿನ ಡೆಲ್ಲಿಯಲ್ಲಿ ಕೂಡಿದ ಸಾಮಾಜಿಕ ಸೇವಕರ ಪರಿಷತ್ತಿನಲ್ಲಿ ಮುಂಬಯಿಯ ಸಾರ್ವಜನಿಕ ಕಾರ್ಯವಂತ್ರಿ ಜೀವರಾಜ ಮೆಹತಾ ಅವರು ಮಾತನಾಡುತ್ತಾ 'ಇಂದು ಭದ್ರವಾದ ಸರಕಾರವು ಇಸಿಯೂರದೂ ಅಶಾಂತಿ ತೃಪ್ತಿಗಳೆಂಬ ಬೆಂಕಿ ಕನಲುವಾಗ, ಬಡತನ, ರೋಗರುಜೆ ಕಷ್ಟನಿಷ್ಠುರಗಳೇ ಜನಜೀವಾಳವಾಗಿರುವಾಗ ಈ ಭದ್ರತೆಯು ತಳಹದಿ ಸುರಕ್ಷಿತವಾಗಿಲ್ಲ'ವೆಂದರು.

ಈ ಮೇಲಿನ ಮಾತುಗಳಿಂದ, ಆದೂ ಮಂತ್ರಿವರ್ಗದಿಂದ ಇವು ಬರುವಾಗ ಸರಕಾರಕ್ಕೆ ಜನಸಾಮಾನ್ಯರ ಸ್ಥಿತಿಗತಿಯು ನಿಜ ಪರಿಸ್ಥಿತಿಯು ಅರಿವಾಗಿದೆ ಎಂದು ತಿಳಿಯಬಹುದು. ಆದರೆ ಬರೀ ತಿಳಿವಳಿಕೆ ಮಾತ್ರ ಈ ದೆಸೆಯಲ್ಲಿ ಸಾಗಬೇಕಾಗಿದೆ.

ಕೆಳೆ ಕಾರಸ್ಥಾನ.

ಎಂದಿನವರೆಗೆ ಸರಕಾರ ಪದ್ಯದ ನೀತಿ ಹಾಗೂ ಧೋರಣೆಗಳನ್ನು ಬದಲಾಯಿಸುವುದಿಲ್ಲವೋ ಅಂದಿನ ವರೆಗೆ ಮಜದೂರರು ಸರಕಾರವನ್ನು ಸಂಶಯ ದೃಷ್ಟಿಯಿಂದ ಕಂಡರೆ ಅದರಲ್ಲಿ ಅವರ ತಪ್ಪಿಲ್ಲ. ಅವುಗೆ ಅದಕ್ಕೆ ಅನೇಕ ಕಾರಣಗಳಿವೆ. ಒಂದನೆಯದಾಗಿ, ಉತ್ಪಾದನೆಯನ್ನು ಹೆಚ್ಚಿಸುವ ಪ್ರಯತ್ನದಲ್ಲಿ ಔದ್ಯೋಗಿಕ ಪ್ರಗತಿಯಿಂದಾಗುವ ಲಾಭದಲ್ಲಿ ಸರಕಾರವನ್ನು ತನ್ನ ವರ್ಚಸ್ಸಿನಡಿ ತರಲು ಕಾರಸ್ಥಾನ ನಡೆಸಿದವರು ಬಂಡವಳಿಗರು ಆವರೆ ಅವರಿಗೆ ಈ ಕಾರಸ್ಥಾನಕ್ಕೆ ಸಿಕ್ಕಿದ ಶಿಕ್ಷಕರ ತಿರಿಗೆಗಳ ಮೂಲಿ! ಇದನ್ನು ಸಹಿಸದೆ ತಮ್ಮ ಅಸಮೂಧಾನವನ್ನು ವ್ಯಕ್ತಪಡಿಸಿದ ದುಡಿಮೆಗಾರರಿಗೆ ಸಿಕ್ಕಿದ ಪುರಸ್ಕಾರ ಲಾಟಿಚಾರ್ಜು, ಟೀಯರ್‌ಗೇಸ್, ಮದ್ದುಗುಂಡು ಮತ್ತು 'ಮೂವನ ಮನೆ!' ಎರಡನೆಯದಾಗಿ, ಅರಿವೆಯ ಬೆಲೆ ಇಳಿಯಲ್ಪಡುವುದೆಂದು ತಿಳಿದು ಗಿರಣಿ ಮೂಲಕರು ಲಾಭದ ಲೋಭದಿಂದ ಕುಯುಕ್ತಿಪರ ಕಾರಣಗಳನ್ನು ಕೊಟ್ಟು ಗಿರಣಿಗಳನ್ನು ಒಂದೊಂದಾಗಿ ಮುಚ್ಚಿದರು. ಕೆಲವು ಗಿರಣಿಗಳಲ್ಲಿ ಸರತಿಗಳನ್ನು ಕಡಿಮೆ ಮಾಡಿದರು. ಇದನ್ನರಿತು ಸರಕಾರಕ್ಕೆ ಕಾರ್ಮಿಕ ನಾಯಕರು ಕೊಟ್ಟ ಎಚ್ಚರಿಕೆಗೆ ಅಪಪ್ರಚಾರದ, ಪಕ್ಷಪಂಗಡದ ಬಣ್ಣ ಕೊಡಲ್ಪಟ್ಟಿತು. ಆದಾಗ್ಯೂ ಅರಿವೆಯ ಅಭಾವದ ಕೂಗು ಹಿಂದಿಗಿಂತ ಇಂದು ಜೋರಾಗಿ ಕೇಳಿಬರುತ್ತಿದೆ.

ಇವು ಸರಕಾರಕ್ಕೆ ಮುರಿತುಹೋಗಿದ ಬಹುದು. ಆದರೆ ಅವುಗಳ ಪರಿಣಾಮದಿಂದ ಸಿಹಿ ಕಹಿಗಳನ್ನುಂಡ, ಉಣ್ಣುತ್ತಿರುವ ಶ್ರಮಜೀವಿಗಳು ಮರೆಯಲಾರರು ಆದುದರಿಂದ ಮಾನ್ಯ ಮಂತ್ರಿಗಳ ಮಾತುಗಳು ಅವರಮೆ ಮೇಲೆ ಏನೂ ಪರಿಣಾಮ ಮಾಡದಿದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ.

ಆದ್ದರಿಂದ ಪಾರಾಗುವುದಕ್ಕೆ ಬಡವ ಬಲ್ಲಿದ, ಉಚ್ಚ ನೀಚವೆಂಬ ಭೇದವಿಲ್ಲದೆ ಪ್ರತಿಯೊಬ್ಬನೂ ಕಷ್ಟನಷ್ಟಗಳನ್ನು ಅನುಭವಿಸಬೇಕು; ಪ್ರತಿಯೊಬ್ಬನೂ ಬಲಿದಾನ ಮಾಡಬೇಕು. ಸರಕಾರ ಈ ಮಾತನ್ನು ಒಪ್ಪಿಕೊಂಡರೆ ಅದರ ಔದ್ಯೋಗಿಕವಾಗಿ, ಶ್ರಮಜೀವಿಗಳ, ಜನಸಾಮಾನ್ಯರ ಈ ಕೆಳಗಿನ ಬೇಡಿಕೆಗಳನ್ನು ಪರಿಶೀಲಿಸಬೇಕು.

ಕಾರ್ಮಿಕರ ಜೀವನಕ್ಕೆ ನಿರ್ಬಂಧ ಹಾಕಬಾರದು.

ಹೆಚ್ಚಿಹಿಡಿಯಲ್ಪಟ್ಟ ಕಾರ್ಮಿಕ ನಾಯಕರ ಯೋಗ್ಯ ರೀತಿಯಲ್ಲಿ ವಿಚಾರಣೆ ನಡೆಯಬೇಕು.

ದೇಶಕ್ಕೊಕ್ಕೇಸ್ಕರ ಜಮೀನ್ದಾರ, ಬ್ಯಾಂಕ್, ಬಂಡವಾಳ ಧನಪಿಪ್ಪಾಸೆ ನಿರ್ನಾಮವಾಗಬೇಕು.

ಕಳ್ಳಪಟ್ಟೆ ನಡೆಸುವವರಿಗೆ ಮೂರು ತಿಂಗಳ ಕಾಲ ಶಿಕ್ಷೆಯಾಗಬೇಕು.

ಇವು ಮಂಡಿಯೆಗಾರರ ಮೇಲೆ ಗಾರ್ಡ್ ಶಂಕರದಿಂದ ಗಂಟುಸೋಸವಾಗಿ ಸಾರುವ, ಕವಿಸೊಡುವ ಸರಕಾರಿ ಪರಿವಾರ, ಮಂತ್ರಿಗಳ ರಾಷ್ಟ್ರಧುರೀಣರ ಮಾತುಗಳಿಗಿಂತ ಹೆಚ್ಚು ಪ್ರಭಾವ ಬೀರೀತು. ಪರಿಣಾಮ ಮಾಡೀತು.

ದೇಶದ ಹಿತ, ಜನತೆಯ ಹಿತವೇ ನಮ್ಮ ಸರಕಾರದ ಹೆಗ್ಗುರಿಯಾದರೆ, ಶ್ರಮಜೀವಿಗಳ ತಳಹದಿಯಲ್ಲಿ ಸ್ಥಾಪಿಸಲಾಗಿರುವ ತಳಹದಿಯಲ್ಲಿ ಸ್ಥಾಪಿಸಲಾಗಿರುವ ಪಕ್ಷಕ್ಕೆ.

'ನುಡಿ'

ದಿ ಟ್ರೊಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.

ಮುಖ್ಯ ಖಚೇರಿ:— ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮುಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆರ್ಗನೈಜರ್
ದಕ್ಷಿಣ ಕೊಡಗು, ಪೊನ್ನಂಪೇಟೆ.
ಅಥವಾ
ಯಂ. ಯು. ಅಚ್ಚಣ್ಣ,
ಏಜೆನ್ಸಿ ಸುಪರಿಂಟೆಂಡೆಂಟ್,
ಮಡಿಕೇರಿ, ಕೊಡಗು.

ಆರ್ಗನೈಜರ್
ಉತ್ತರ ಕೊಡಗು, ಮಡಿಕೇರಿ.
ಅಥವಾ
ಎಂ. ಎ. ಬೆಳ್ಯಪ್ಪ,
ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟಾ, ಮಂಗಳೂರು.

ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯು ಪ್ರಾಮುಖ್ಯಾಂಶಗಳು.

ಹೊಸ ಉದ್ಯನು ರೂ. .... 6,13,00,000 ಮೊತ್ತದ್ದು.
ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. .... 27,73,00,000 ,,
ಒಟ್ಟು ನಿಧಿ. ರೂ. .... 8,30,00,000 ,,
ಸ್ಥಾಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು 10,96,00,000 ,,
1,28,000 ಕ್ಕೆ ಮೀರಿದ ತೃಪ್ತಿ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ರೋಶನ್‌ಲಾಲ್, ಜನರಲ್ ಮೇನೇಜರ್.

ಪ್ರಧಾನ ಕಛೇರಿ:
ಎಂಪೈರ್ ಹೌಸ್, ಹಾರ್ನ್‌ಬಿ.
ರೋಡ್, ಫೋರ್ಟ್, ಬೊಂಬೆ.

ಅಂಗ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡರಸ್ತೆ, ಬೆಂಗಳೂರು.

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,
ಫ್ಯೇಜರ್ ಪೇಟೆ.
ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಮಣ್ಣುಪಾಲಾಗಿ ಹೋಗುತ್ತಿರುವ ಮೂಳೆಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ನೇಮಕವಾದ ಏಜೆಂಟರುಗಳು ಕಂಪೆನಿಯಿಂದ ಗೊತ್ತಾದ ಸ್ಥಳಕ್ಕೆ ಮೂಳೆಗಳನ್ನು ಸಾಗಿಸಿ ಕೊಟ್ಟಲ್ಲು ಮಣ ಒಂದರ ರೂ. 0–12–0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫ್ಯೇಜರ್‌ಪೇಟೆ,
ತಾ ೨೨-೧೨-೪೯.

ಕೆ. ಕೆ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

ರಿಪಬ್ಲಿಕ್ ಆರಂಭೋತ್ಸವದ ಕಾರ್ಯಕ್ರಮ.

ಗವರ್ನರ್ ಜನರಲ್ ಶ್ರೀ. ಸಿ. ರಾಜಗೋಪಾಲಾಚಾರಿಯವರು ಜನವರಿ ೨೬ ರ ಪ್ರಾತಃಕಾಲ ಗವರ್ನಮೆಂಟ್ ಹೌಸಿನ ದರ್ಬಾರ್ ಹಾಲಿನಲ್ಲಿ ನಡೆಯುವ ಸಮಾರಂಭದಲ್ಲಿ ಘೋಷಣಾ ಪತ್ರವೊಂದನ್ನು [illegible] ಭಾರತವನ್ನು ರಿಪಬ್ಲಿಕ್ ಆಗಿದೆ ಘೋಷಣೆಯನ್ನು ಓದಿದ ನಂತರ ಗವರ್ನರ್ ಜನರಲ್‌ರು ಸಿಂಹಾಸನ ತ್ಯಾಗ ಮಾಡಿ ರಿಪಬ್ಲಿಕಿನ ಅಧ್ಯಕ್ಷರಾಗಿ ಚುನಾಯಿತರಾಗಿರುವವರನ್ನು ಸಿಂಹಾಸನಕ್ಕೆ ಕರೆದೊಯ್ಯುವರು. ಭಾರತ ಸುಪ್ರೀಂ ಕೋರ್ಟಿನ ಚೀಫ್ ಜಸ್ಟಿಸರಾದ ಶ್ರೀ. ಹರಿಲಾಲ್ ಕಾನಿಯರವರು ಅಧ್ಯಕ್ಷರಿಗೆ ಪ್ರಮಾಣ ವಚನ ಓದಿ ಹೇಳುವರು.

ಜನವರಿ ೨೬ನೇ ತಾ. ಭಾರತ ರಾಜ್ಯಾಂಗ ಸಭೆಯು ಸೇರಿ ರಿಪಬ್ಲಿಕ್ ಅಧ್ಯಕ್ಷರನ್ನು ಚುನಾಯಿಸುವುದು. ಡಾ. ರಾಜೇಂದ್ರ ಪ್ರಸಾದರೇ ಈ ಪದವಿಗೆ ಸರಿಯೆಂಬದು ಸರ್ವವಿದಿತವಾದ ಸಂಗತಿ.

ಶ್ರೀ. ಸಿ. ರಾಜಗೋಪಾಲಾಚಾರಿಯವರು ಮುಂದೆ ಏನು ಮಾಡುವರೆಂಬುದು ಗೊತ್ತಿಲ್ಲ. ಆದರೆ [illegible] ಕೆಲಸವಾವು

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) ,, 262 ,, 274 ,,
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 627–5–0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4–10–0
6. 12, 16, 20ನೇ ನಂಬರು ಕೋವಿಗಳ ತೋಟಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.

(ಆವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52–21

CRESCENT

FOR PROTECTION AND SERVICE.

It is best to represent and insure with

The **CRESCENT** Insurance Co., Lt.d,

H: O: BOMBAY.] [*Established 1919.*

For particulars write to:

Sri B. A. Poovaiah *Organiser* *Pollibetta, Coorg.* **or** **The Branch Manager,** *22 B. Mahatma Gandhi Road, Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.)

ಅಧಿಕೃತ ಶೇರು ಭಂಡವಾಳ ರೂ. 10,00,000.
ವಸೂಲಾದ ಶೇರು ಮೊಬಲಗು ರೂ. 1,65,000.
ಕ್ಷೇಮನಿಧಿ ರೂ. 50,000.

ಈ ಬ್ಯಾಂಕಿನಿಂದ ರಿಜಿಸ್ಟರ್ಡ್ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸ್ಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,
ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾನ್ಜಿ.

[illegible] ಕೊಂದರೆ ಒಂದು ರಾಷ್ಟ್ರದ ಅತ್ಯುನ್ನತಾಧಿ ವಿರುದ್ಧವಾದುದು. ಕಾರಿಯಾಗಿದ್ದವರು ಪುನಃ ಬೇರೆ ಸರ್ಕಾ

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.